ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 | ಸಂಚಿಕೆ 20 | ಜುಲೈ 29, 1979 | 40 ಪೈಸೆ

ಮಧ್ಯಂತರ ಚುನಾವಣೆ ?

ಶ್ರೀ ಮೊರಾರ್ಜಿ ದೇಸಾಯಿ ಮತ್ತು ಚರಣ್‌ಸಿಂಗ್‌ರವರು ತಮ್ಮ ತಮ್ಮ ಬೆಂಬಲಿಗರ ಪಟ್ಟಿಯನ್ನು ರಾಷ್ಟ್ರಪತಿಯವರಿಗೆ ಕೊಟ್ಟಿರುವರು. ಪತ್ರಿಕಾ ವರದಿಯಂತೆ ಮೊರಾರ್ಜಿ ದೇಸಾಯಿಯವರು ತನಗೆ 279 ಸದಸ್ಯರ ಬೆಂಬಲವಿದೆಯೆಂದೂ, ಚರಣಸಿಂಗರು ತನಗೆ 280 ಸದಸ್ಯರ ಬಲವಿದೆಯೆಂದೂ ಹೇಳಿರುವರು. "ಜನಸಂಘ-ಆರ್. ಎಸ್. ಎಸ್. ಕೂಟ ಅಥವಾ ಇಂದಿರಾ ಕಾಂಗ್ರೆಸ್ಸಿನ ಬೆಂಬಲವಿಲ್ಲದೆ" ರಚಿತವಾಗುವ ಮತ್ತು ಇನ್ನೊಮ್ಮೆ ಸ್ಥಾನಬದ್ಧತಾ ಕಾಯ್ದೆ ಜಾರಿಗೆ ತರುವುದಿಲ್ಲವೆಂದು ಭರವಸೆ ಈಯುವ, ರೈಲ್ವೆ ಕಾರ್ಮಿಕರಿಗೆ ಬೋನಸ್ಸನ್ನು ಕೊಡಲು ಒಪ್ಪುವ, ಮುಷ್ಕರ ಹೂಡಿದ್ದ ಪೋಲೀಸರ ಮೇಲೆ ಕ್ರಮ ತೆಗೆದುಕೊಳ್ಳದಿರಲು ಒಪ್ಪುವ, ರಿಸರ್ವ್ ಬ್ಯಾಂಕ್ ನೌಕರರ ಮುಷ್ಕರ ನಿಷೇಧ ಮತ್ತು ಕಡ್ಡಾಯ ಠೇವಣಿ ಹಣ ಮರುಪಾವತಿ ತಡೆಹಿಡಿಯುವ ಸುಗ್ರೀವಾಜ್ಞೆಗಳನ್ನು ಹಿಂತೆಗೆಯಲು ಭರವಸೆ ಕೊಡುವ ಸರಕಾರಕ್ಕೆ ಮಾತ್ರ ಬೆಂಬಲವೀಯುವುದಾಗಿ ಹೇಳಿದ್ದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಎರಡು ಬಣಗಳಿಗೂ ಬೆಂಬಲವೀಯದೆ ತಟಸ್ಥವಾಗಿರಲು ತೀರ್ಮಾನಿಸಿದೆ. ಎಡ ಪಕ್ಷಗಳಾದ ಫಾರ್ವರ್ಡ್ ಬ್ಲಾಕ್ ಮತ್ತು

ಸಂಪಾದಕೀಯ

ಕ್ರಾಂತಿಕಾರಿ ಸಮಾಜವಾದಿ ಪಕ್ಷಗಳು ಇದೇ ನಿಲುಮೆಯನ್ನು ತಳೆದಿವೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಿಲುಮೆಯು "ಸರ್ವಾಧಿಕಾರ ಮತ್ತು ಕೋಮುಶಕ್ತಿಗಳ ಆಧಾರಿತ ಸರಕಾರಕ್ಕೆ ಬೆಂಬಲ ಕೊಡುವುದಿಲ್ಲ"ವೆಂದು ಐದು ಎಡಪಕ್ಷಗಳಿತ್ತ ಜಂಟೀ ಹೇಳಿಕೆಗೆ ಹೊಂದಿಕೊಂಡಿದೆ. ಸಿ. ಪಿ. ಐ. ಯು ಇಂದಿರಾ ಬೆಂಬಲಿತ ಚರಣಸಿಂಗರ ಕೂಟಕ್ಕೆ ಬೆಂಬಲವೀಯಲು ತೀರ್ಮಾನಿಸಿದ್ದು, ಈ ಪಕ್ಷವು ಅನುಸರಿಸಿಕೊಂಡು ಬಂದ ಧೋರಣೆಯ ಹಿನ್ನೆಲೆಯಲ್ಲಿ ಆಶ್ಚರ್ಯವೇನಿಲ್ಲ.

ದೇಸಾಯಿ ಮತ್ತು ಚರಣಸಿಂಗರ ಪಟ್ಟಿಯಲ್ಲಿರುವ ಒಟ್ಟು ಸದಸ್ಯರ ಸಂಖ್ಯೆ, ಮತ ಚಲಾಯಿಸುವವರಿಗಿಂತ ಹೆಚ್ಚಿದೆ. ಎರಡು ಪಟ್ಟಿಗಳಲ್ಲಿ ಒಂದೇ ಹೆಸರುಗಳೂ ಇವೆ. ಅಂತೂ ಪರಿಸ್ಥಿತಿಯು ಅನಿಶ್ಚಿತತೆಯಿಂದ ಕೂಡಿದೆ. ಇವರಿಬ್ಬರಲ್ಲಿ ಬಹುಸಂಖ್ಯಾತರ ಬೆಂಬಲವಿದೆಯೆಂದು ಯಾರಾದರೊಬ್ಬರಿಗೆ ತೋರಿಸಲು ಸಾಧ್ಯವಾದಲ್ಲಿ ರಚಿತವಾಗಲಿರುವ ಸರಕಾರವು "ಬೆಕ್ಕಿನ ಮೇಲೆ ನಿಲ್ಲಿಸಿದ ದೀಪದಂತೆ" ಆಗುವುದು. ಒಂದು ವೇಳೆ ಸರಕಾರ ರಚಿಸಲು ಸಾಧ್ಯತೆ ಇದ್ದರೂ, ಅಧಿಕಾರ ಸ್ಥಾಪಿಸುವ ಮೊದಲೇ ಹೊಸ ಸರಕಾರವು ಮುರಿದು ಬಿದ್ದರೂ ಆಶ್ಚರ್ಯವಿಲ್ಲ. ಇಂದಿರಾಗಾಂಧಿಯ ಬೆಂಬಲ ಪಡೆದ ಚರಣಸಿಂಗರ ಸರಕಾರ ರಚಿತವಾದರೆ, ಇಂದಿರಾಗಾಂಧಿಯ ಬೆಂಬಲಕ್ಕೆ ತೆರಬೇಕಾದ

[ಕಡೆಯ ಪುಟ ನೋಡಿ]

ಪಶ್ಚಿಮ ಬಂಗಾಳದಲ್ಲಿ ವಾಮರಂಗ ಸರ್ಕಾರದ ಭೂಸುಧಾರಣೆ

ಆರ್ಥಿಕ ಯೋಜನೆಗಳ ಒಳ್ಳೆಯ ಫಲಿತಾಂಶಗಳನ್ನು ಕೆಳವರ್ಗದ ಜನತೆಯಲ್ಲಿ ಹಂಚಬೇಕು ಎಂಬ ಬೇಡಿಕೆಯು ವರ್ಗಗಳಿಂದ ಕೂಡಿದ ಸಮಾಜದಲ್ಲಿ ಅವಾಸ್ತವ ಮತ್ತು ಪೊಳ್ಳಾದದ್ದು ಎಂಬುದರಬಗ್ಗೆ ವಾಮರಂಗ ಸರ್ಕಾರಕ್ಕೆ ಅರಿವಿದೆ. ಕೃಷಿ ಸಾಲಗಳನ್ನು ವಿಪರೀತವಾಗಿ ಕೊಡಲಾಗಿದ್ದು, ಉಪಕರಣಗಳೂ ಸೇರಿದಂತೆ ಅನೇಕ ಸವಲತ್ತುಗಳನ್ನು ಕೊಡಲಾಗುತ್ತವೆ. ಆದರೆ ಇವೆಲ್ಲವೂ ಜಮೀನನ್ನು ತಮ್ಮ ಆಸ್ತಿ ಎಂದು ಭಾವಿಸುವವರಿಗೆ ಪ್ರಯೋಜನಕಾರಿಯಾಗಿದೆಯೇ ಹೊರತು ಬಡವರಿಗಲ್ಲ. ಸಧ್ಯದ ಭೂಸುಧಾರಣಾ ಚಳುವಳಿಯ ಮುಖ್ಯ ಉದ್ದೇಶವೆಂದರೆ, ಅಸಹಾಯಕ ಬೆಳೆ ಕೊಯ್ಯುವವರೇ ಬೆಳೆ ಪಡೆದುಕೊಳ್ಳುವ ಹಕ್ಕು ಪಡೆದುಕೊಳ್ಳುವಂತೆ ಮಾಡಿ, ಜಮೀನನ್ನು ಹಂಚಿ ಜಮೀನಿಲ್ಲದವರು ಆತ್ಮವಿಶ್ವಾಸ ಬೆಳೆಸಿಕೊಳ್ಳುವಂತೆ ಮಾಡುವುದು. ಅವರ ಮೇಲೆ ನಡೆಯುವ ಯೋಜಿತ ದಾಳಿಗಳಿಂದ ಅವರನ್ನು ರಕ್ಷಿಸಲು, ಸದ್ಯದ ಸರ್ಕಾರವು, ಅವರು ಸ್ಟೇಟ್ ಬ್ಯಾಂಕ್ ಮತ್ತು ಇತರ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯುವಂತೆ ಮಾಡಿ, ಈಗ ತಮ್ಮ ಮಾಲೀಕರ ದಯೆಯಲ್ಲಿ ಜೀವಿಸುತ್ತಿರುವವರು ಮನೆಕಟ್ಟಿಕೊಂಡು ತಮ್ಮ ಮನೆ ಹಕ್ಕನ್ನು ಪಡೆದುಕೊಳ್ಳುವಂತೆ ಮಾಡಿದೆ.

ಭೂಸುಧಾರಣೆ ಮತ್ತು ಗ್ರಾಮೀಣ ಅಭಿವೃದ್ಧಿಗಳ ಉದ್ದೇಶದ ಈಡೇರಿಕೆಗಾಗಿ ಸದ್ಯದ ವಾಮರಂಗ ಸರ್ಕಾರವು, 'ಬಾರ್ಗ ಯೋಜನೆ'ಯ ಮೂಲಕ ಬಾರ್ಗದಾರರಿಗೆ ಅವಧಿಯನ್ನು ಗೊತ್ತುಮಾಡಿ ಅವರ ಹೆಸರನ್ನು ದಾಖಲು ಮಾಡುವ ಮತ್ತು ದೊಡ್ಡ ಭೂಮಾಲೀಕರ ಹೆಚ್ಚುವರಿ ಜಮೀನನ್ನು ವಶಪಡಿಸಿಕೊಂಡು ಬೇರೆಯವರಿಗೆ ಹಂಚುವ ಮತ್ತು ಬಾರ್ಗದಾರರಿಗೆ ಮತ್ತು ಇಲ್ಲದವರಿಗೆ ಬೆಳೆ ಕುಯಿಲು ಸಮಯಗಳಲ್ಲಿ ಹಣಕಾಸು ಸಂಸ್ಥೆಗಳಿಂದ ಹಣ ಕೊಡಿಸುವ, ಮನೆ ಜಮೀನುಗಳನ್ನು ವಶಪಡಿಸಿಕೊಂಡು ಮನೆಯಿಲ್ಲದ ಕೃಷಿಕಾರ್ಮಿಕರ ಹೆಸರಿಗೆ ಅದನ್ನು ಶೀಘ್ರದಲ್ಲಿ ವರ್ಗಾಯಿಸುವ ಕಾರ್ಯಕ್ರಮಗಳೊಡನೆ ಮುಂದುವರೆಯುತ್ತಿದೆ.

ಕಂದಾಯ ಸಲ್ಲಿಕೆ :

ಈ ಮಧ್ಯದಲ್ಲಿ ವಾಮರಂಗ ಸರ್ಕಾರವು 12 ಬಿಘಾಗಳ ನೀರಾವರಿ ಜಮೀನು ಮತ್ತು 18 ಬಿಘಾಗಳ ನೀರಾವರಿಯಿಲ್ಲದ ಜಮೀನುಗಳನ್ನು ತೆರಿಗೆ ಅಥವಾ ಕಂದಾಯದಿಂದ ಮುಕ್ತ ಮಾಡಿದೆ. ರೈತರು ಲೆವಿ ನೀಡದಂತೆ ಮನ್ನಾ ಮಾಡಿದೆ. ರೈತರ ಪ್ರಜಾಪ್ರಭುತ್ವವಾದಿ ಚಳುವಳಿಗಳ ಎಲ್ಲ ರೀತಿಯ

[ಕಡೆಯ ಪುಟ ನೋಡಿ]

ಆಗಸ್ಟ್ 13 ಬೇಡಿಕೆಗಳ ದಿನ, ಸೆಪ್ಟೆಂಬರ್ 14 ರಂದು ಮುಷ್ಕರ

ಸಾರ್ವಜನಿಕ ಕ್ಷೇತ್ರದ ಕಾರ್ಮಿಕ ಸಂಘಗಳ ಸಮಾವೇಶದ ಕರೆ

ಈ ತಿಂಗಳಿನ 19, 20 ರಂದು ಬೆಂಗಳೂರಿನಲ್ಲಿ ನಡೆದ ಸಾರ್ವಜನಿಕ ಕ್ಷೇತ್ರದ ಕಾರ್ಮಿಕ ಸಂಘಗಳ ಅಖಿಲ ಭಾರತ ಸಮಾವೇಶವು ಸಾರ್ವಜನಿಕ ಕ್ಷೇತ್ರದ ಕಾರ್ಮಿಕ ಚಳುವಳಿಯ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಹಿಂದೆ ಹೈದರಾಬಾದ್ ಮತ್ತು ನವದೆಹಲಿಗಳಲ್ಲಿ ನಡೆದ ಅಖಿಲ ಭಾರತ ಸಮಾವೇಶಗಳಿಗಿಂತಲೂ ಬೆಂಗಳೂರಿನ ಸಮಾವೇಶವು ವಿಶಾಲತಳಹದಿಯ ಪ್ರಾತಿನಿಧ್ಯದ ಮೇಲೆ ನಡೆಯಿತು. ವಿಮೆ(96) ಮತ್ತು ಬ್ಯಾಂಕ್(86) ಕೈಗಾರಿಕೆಗಳ ಕಾರ್ಮಿಕ ಸಂಘಗಳ ಪ್ರತಿನಿಧಿಗಳೂ ಈ ಸಮಾವೇಶದಲ್ಲಿ ಮೊದಲಬಾರಿಗೆ ಭಾಗವಹಿಸಿದರು. ಕಲ್ಲಿದ್ದಲು, ಚಿನ್ನದಗಣಿ, ಉಕ್ಕು, ಬಂದರು, ವಿಮಾನ, ಟೆಲಿಫೋನ್, ಬಿ.ಇ.ಎಲ್, ಹೆಚ್.ಎಂ.ಟಿ, ಬಿ.ಹೆಚ್.ಇ.ಎಲ್, ಬಿ.ಎಚ್.ವಿ.ಪಿ, ಎಚ್.ಎಸ್.ಸಿ.ಎಲ್, ಹಿಂದುಸ್ತಾನ್ ಟೆಲಿಪ್ರಿಂಟರ್ಸ್, ಹಿಂದುಸ್ತಾನ್ ಕೇಬಲ್ಸ್, ಬಿ.ಇ.ಎಂ.ಎಲ್. ಮೊದಲಾದ ಕೈಗಾರಿಕೆಗಳಲ್ಲಿರುವ ಸಿ.ಐ.ಟಿ.ಯು, ಎಚ್.ಎಂ.ಎಸ್, ಎ.ಐ.ಟಿ.ಯು.ಸಿ, ಬಿ.ಎಂ.ಎಸ್, ಯು.ಟಿ.ಯು.ಸಿ, ಯು.ಟಿ.ಯು.ಸಿ (ಲೆನಿನ್ ಸರಣಿ) ಈ ಕೇಂದ್ರ ಕಾರ್ಮಿಕ ಸಂಘಟನೆಗಳಿಗೆ ಸೇರಿದ, ಹಾಗೂ ಯಾವ ಕೇಂದ್ರ ಕಾರ್ಮಿಕ ಸಂಘಟನೆಗೂ ಸೇರದ ಸುಮಾರು 900 ಪ್ರತಿನಿಧಿಗಳು – ವೀಕ್ಷಕರು ಈ ಸಮಾವೇಶದಲ್ಲಿ ಭಾಗವಹಿಸಿದ್ದರು. ಐ.ಎನ್.ಟಿ.ಯು.ಸಿ. ಈ ಸಮಾವೇಶದಲ್ಲಿ ಭಾಗವಹಿಸದಿದ್ದರೂ ಐ.ಎನ್.ಟಿ.ಯು.ಸಿ.ಗೆ ಸೇರಿದ ಸಂಘಗಳಿಂದ ಬಂದ 9 ಪ್ರತಿನಿಧಿಗಳು ಈ ಸಮಾವೇಶದಲ್ಲಿ ಭಾಗವಹಿಸಿದ್ದರು.

ಕೆ.ಜಿ. ಶ್ರೀವಾತ್ಸವ(ಎ.ಐ.ಟಿ.ಯು.ಸಿ.), ಎಸ್. ವೆಂಕಟರಾವ್(ಎಚ್.ಎಂ.ಎಸ್.), ಮದನ್ ಫಡ್ನೀಸ್(ಸಿ.ಐ.ಟಿ.ಯು.), ಬಿ.ಎನ್.ಸಾಠೆ(ಬಿ.ಎಂ.ಎಸ್.) ಅನಿಲ್ ದಾಸ್ ಚೌಧುರಿ(ಯು.ಟಿ.ಯು.ಸಿ.), ಪ್ರೀತೀಶ್ ಚಂದ್ರ(ಯು.ಟಿ.ಯು.ಸಿ - ಲೆನಿನ್ ಸರಣಿ) ಮತ್ತು ಕೆ.ಎಸ್. ಕೃಷ್ಣಮೂರ್ತಿ (ಎಚ್.ಎ.ಇ.ಎ.) ಯವರನ್ನೊಳಗೊಂಡ ಅಧ್ಯಕ್ಷಮಂಡಳಿಯು ಈ ಸಮಾವೇಶವನ್ನು ನಡೆಸಿತು.

ಸ್ವಾಗತ ಸಮಿತಿಯ ಸಂಚಾಲಕ ಕೆ.ಎಸ್. ಕೃಷ್ಣಮೂರ್ತಿಯವರು ಸ್ವಾಗತ ಭಾಷಣ ಮಾಡುತ್ತಾ "ಕಾರ್ಮಿಕ ವರ್ಗದ ಮೂಲಭೂತ ಸಿದ್ಧಾಂತವನ್ನು ದೃಷ್ಟಿಯಲ್ಲಿಟ್ಟು, ಬೆಂಗಳೂರಿನ ಕಾರ್ಮಿಕವರ್ಗದ ಮತ್ತು ಸ್ವಾಗತ ಸಮಿತಿಯ ಪರವಾಗಿ ನನ್ನ ವಿಶ್ವಾಸವನ್ನು ಪುನರುಚ್ಚರಿಸುತ್ತೇನೆ – ಬಂಡವಾಳಶಾಹಿ ಪದ್ಧತಿಯ ಕಪಿ ಮುಷ್ಟಿಯಲ್ಲಿ ನರಳುತ್ತಿರುವ ಜನಸಮುದಾಯವನ್ನು ವಿಮೋಚಿಸಿ ಶೋಷಣಾರಹಿತ ಸಮಾಜವನ್ನು ನಿರ್ಮಿಸಲು ನಡೆಯುವ ಹೋರಾಟವನ್ನು ಈ ಸಮಾವೇಶವು ತೆಗೆದುಕೊಳ್ಳುವ ನಿರ್ಧಿಷ್ಟ ಮತ್ತು ಸರಿಯಾದ ತೀರ್ಮಾನಗಳು ಮುಂದೆ ಕೊಂಡೊಯ್ಯುತ್ತವೆ," ಎಂದು ಹೇಳಿದರು.

ಎ. ಐ. ಟಿ. ಯು. ಸಿ. ಪ್ರಧಾನ ಕಾರ್ಯದರ್ಶಿ ಕೆ.ಜಿ. ಶ್ರೀವಾತ್ಸವ ಸಿ.ಐ.ಟಿ.ಯು. ಕಾರ್ಯದರ್ಶಿ ಡಾ.ಎಂ.ಕೆ. ಪಂಧೆ, ಬಿ.ಎಂ.ಎಸ್. ಪ್ರಧಾನ ಕಾರ್ಯದರ್ಶಿ ರಾಮನರೇಶ್ ಸಿಂಗ್, ಯು.ಟಿ.ಯು.ಸಿ (ಲೆನಿನ್-ಸರಣಿ)ಯ ಪ್ರಧಾನ ಕಾರ್ಯದರ್ಶಿ ಪ್ರೀತೀಶ್ ಚಂದ್ರ, ಎಚ್.ಎಂ.ಎಸ್. ಪ್ರಧಾನ ಕಾರ್ಯದರ್ಶಿ ಡಾ. ಶಾಂತಿಪಟೇಲ್, ಯು. ಟಿ. ಯು. ಸಿ. ಯ ಮೋತೀಶ್ ರಾಯ್ ಸಮಾವೇಶವನ್ನುದ್ದೇಶಿಸಿ ಭಾಷಣಮಾಡಿದರು.

ಸಮಾವೇಶದಲ್ಲಿ ಮಾತನಾಡಿದ ಐವತ್ತಕ್ಕೂ ಹೆಚ್ಚು ಪ್ರತಿನಿಧಿಗಳು ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಒಗ್ಗಟ್ಟು ಮತ್ತು ಐಕ್ಯಚಳುವಳಿಯ ಅಗತ್ಯವನ್ನು ಒತ್ತಿ ಹೇಳಿದರು.

ಎಚ್.ಎಂ.ಎಸ್. ಅಧ್ಯಕ್ಷ ಎಸ್. ವೆಂಕಟರಾಮ್ ಸಮಾವೇಶದ ಘೋಷಣೆಯನ್ನು ಮಂಡಿಸಿದರು.

ಸಿ.ಐ.ಟಿ.ಯು. ಮುಖಂಡ ಮದನ್ ಫಡ್ನೀಸ್ ರಿಜರ್ವ್ ಬ್ಯಾಂಕ್ ನೌಕರರ ಮತ್ತು ಇ.ಎಸ್.ಐ. ನೌಕರರ ಹೋರಾಟಕ್ಕೆ ಬೆಂಬಲ ಕೊಡುವ ನಿರ್ಣಯಗಳನ್ನು ಮಂಡಿಸಿದರು. ಇವುಗಳನ್ನು ಸಮಾವೇಶವು ಅಂಗೀಕರಿಸಿತು.

ಸಮಾವೇಶದ ಘೋಷಣೆಯಲ್ಲಿ ಈ ಬೇಡಿಕೆಗಳಿವೆ: 1. ಸಾರ್ವಜನಿಕ

[ಕಡೆಯ ಪುಟ ನೋಡಿ]

ತಾತಗುಣಿ ಎಸ್ಟೇಟಿನಲ್ಲಿ ಅರುವತ್ತೆಂಟು ಕಾರ್ಮಿಕರ ಬಂಧನ

ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿರುವ ತಾತಗುಣಿ ಎಸ್ಟೇಟಿನಲ್ಲಿ ಕೆಲಸ ಮಾಡುವ ಕಾರ್ಮಿಕರು ಎಸ್ಟೇಟ್ ಮಾಲೀಕರಾದ ದೇವಿಕಾರಾಣಿ ರೋರಿಚ್ ಅವರು ಈ ಹಿಂದೆ ಮಾಡಿಕೊಂಡಿದ್ದ ಒಪ್ಪಂದದ ಪ್ರಕಾರ ವಜಾ ಆದ ಕಾರ್ಮಿಕರಿಗೆ ಪುನಃ ಕೆಲಸ, ಹೆರಿಗೆ ಭತ್ಯ, ಕನಿಷ್ಟ ಕೂಲಿ ಜಾರಿ ಮೊದಲಾದುವುಗಳನ್ನು ಕಾರ್ಯಗತಗೊಳಿಸಬೇಕೆಂದು ಒತ್ತಾಯಿಸಿ ಅನಿರ್ಧಿಷ್ಟ ಕಾಲದ ಮುಷ್ಕರ ನಡೆಸುತ್ತಲಿರುವರು. ತಾ. 24.7.79 ರಂದು ಎಸ್ಟೇಟ್ ಕಾರ್ಮಿಕ ಸಂಘದ ಕಾರ್ಯದರ್ಶಿಯವರೂ, ಜಿಲ್ಲಾ ರೈತಸಂಘದ ಪ್ರಧಾನ ಕಾರ್ಯದರ್ಶಿಯವರೂ ಆದ ಕಾಂ.ಪಿ. ಜಗನ್ನಾಥನವರು ಸೇರಿದಂತೆ 68 ಮಂದಿ ಕಾರ್ಮಿಕರನ್ನು ಬಂಧಿಸಿರುವರು. ಇವರಲ್ಲಿ ಹೆಚ್ಚಿನವರು ದಲಿತರಾಗಿದ್ದು, 50 ಮಂದಿ ಮಹಿಳೆಯರು ಸೇರಿರುವರು.

ಕಾರ್ಮಿಕ ಸಂಘದೊಡನೆ ಮಾಡಿಕೊಂಡ ಒಪ್ಪಂದದ ಪ್ರಕಾರ ನಡೆದುಕೊಳ್ಳದ ಮಾಲಕರ ಮೇಲೆ ಕ್ರಮ ತೆಗೆದುಕೊಳ್ಳುವ ಬದಲು ಸರಕಾರವೂ, ಪೋಲೀಸರೂ ಕಾರ್ಮಿಕರ ಹೋರಾಟವನ್ನು ಹತ್ತಿಕ್ಕುತ್ತಲಿದ್ದಾರೆ. ಸರಕಾರದ ಕಾರ್ಮಿಕರ ವಿರೋಧಿ ನೀತಿಯನ್ನೂ, ಪೋಲೀಸ್ ದೌರ್ಜನ್ಯವನ್ನೂ ಖಂಡಿಸಿ, ಬಂಧಿತರನ್ನೆಲ್ಲಾ ಬಿಡುಗಡೆ ಮಾಡಿ ಕೇಸನ್ನು ಹಿಂತೆಗೆದುಕೊಳ್ಳಬೇಕೆಂದು ಕಾರ್ಯದರ್ಶಿಯವರು ಹೇಳಿಕೆ ಇತ್ತಿರುವರು. ದಲಿತ, ಕಾರ್ಮಿಕರ ಈ ಹೋರಾಟಕ್ಕೆ ಬೆಂಬಲ ನೀಯಲು ಎಲ್ಲರೂ ಮುಂದಾಗಬೇಕೆಂದು ವಿನಂತಿಸಿರುವರು.

●

ದಾಂಡೇಲಿ ಪುರಸಭೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆ

ದಾಂಡೇಲಿ ಪುರಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯು ಇತ್ತೀಚೆಗೆ ನಡೆಯಿತು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯಸಮಿತಿ ಸದಸ್ಯ ಕಾಂ. ಆರ್. ಜಿ. ಸ್ಥಳೇಕರ್ ರವರು ಅಧ್ಯಕ್ಷರಾಗಿಯೂ, ಉಪಾಧ್ಯಕ್ಷರಾಗಿ ಸಿ.ಐ.ಟಿ.ಯು. ರಾಜ್ಯ ಮಂಡಳಿ ಸದಸ್ಯ ಕಾಂ.ಎಸ್.ಕೆ. ಸವಂತ್‌ರವರೂ ಸರ್ವಾನುಮತದಿಂದ ಆಯ್ಕೆಯಾಗಿರುವರು.

○

ಕುಣಿಗಲ್ ಪುರಸಭೆ ಪದಾಧಿಕಾರಿಗಳ ಆಯ್ಕೆ

ತುಮಕೂರು ಜಿಲ್ಲೆ ಕುಣಿಗಲ್ಲಿನ ಪುರಸಭೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯು ಇತ್ತೀಚೆಗೆ ನಡೆಯಿತು. ಹೊಂದಾಣಿಕೆ ಕೂಟದ ಶ್ರೀ ಯಲ್ಲಪ್ಪನವರು ಅಧ್ಯಕ್ಷರಾಗಿಯೂ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾಂ. ಯೂನಸ್ ಖಾನ್ ಅವರು ಉಪಾಧ್ಯಕ್ಷರಾಗಿಯೂ ಆಯ್ಕೆಯಾಗಿರುವರು.

○

ಆಟೋರಿಕ್ಷಾ ಚಾಲಕರ ಸಭೆ

ಆಟೋರಿಕ್ಷಾ ಚಾಲಕರ ಮೇಲೆ ಪೋಲೀಸರ ದಬ್ಬಾಳಿಕೆ, ಕಿರುಕುಳಗಳು ಇತ್ತೀಚೆಗೆ ಹೆಚ್ಚಾಗಿವೆ. ಕೇಂದ್ರ ಸರ್ಕಾರದ ಎಣ್ಣೆ ಬೆಲೆ ಏರಿಕೆಯಿಂದ ಮತ್ತು ಆಟೋಗಳಲ್ಲಿ ಮೂರು ಜನರನ್ನು ಕೊಂಡೊಯ್ಯಬೇಕೆಂಬ ಆಲೋಚನೆಯಿಂದ ಆಟೋ ಚಾಲಕರ ವರಮಾನಕ್ಕೆ ಧಕ್ಕೆ ಬರುತ್ತಧೆ. ಈ ವಿಚಾರಗಳ ಬಗ್ಗೆ ಚರ್ಚಿಸಲು ಆಟೋರಿಕ್ಷಾ ಚಾಲಕರ ಸಂಘವು ತಾ. 31-7-79 ರಂದು ಸರ್ವಸದಸ್ಯರ ಸಭೆಯನ್ನು ಕರೆದಿದೆ. ಈ ಸಭೆಯಲ್ಲಿ ಕಾಂ. ಮಹಮ್ಮದ್ ದಸ್ತಗೀರ್, ವಾಟಾಳ್ ನಾಗರಾಜ್, ಕೆ. ಶ್ರೀರಾಮುಲು, ದ್ರಾವಿಡಮಣಿ, ಟಿ. ಎಸ್. ಅನಂತರಾಮ್ ಇವರು ಮಾತನಾಡಲಿದ್ದಾರೆ. ಕಾಂ. ಎಸ್. ಸೂರ್ಯನಾರಾಯಣ ರಾವ್ ಅಧ್ಯಕ್ಷತೆ ವಹಿಸುತ್ತಾರೆ.

○

ಕುಣಿಗಲ್‌ನಲ್ಲಿ ವಸತಿಹೀನರ ಹೋರಾಟ

ತುಮಕೂರು ಜಿಲ್ಲೆಯ ಕುಣಿಗಲ್ ಟೌನಿನ ಪೌರಸಮಿತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಪದವಿಗಳ ಚುನಾವಣೆ ನಡೆದ ಸಂದರ್ಭದಲ್ಲಿ ಈ ಊರಿನ ನೂರಾರು ವಸತಿಹೀನರು, ಮನೆ ನಿವೇಶನಗಳನ್ನು ಹಂಚಬೇಕೆಂದು ಒತ್ತಾಯಿಸಿ ಸತ್ಯಾಗ್ರಹ ನಡೆಸಿದರು. ಇದರ ನಾಯಕತ್ವವನ್ನು ಕಾಂ. ಮಹಮ್ಮದ್ ದಸ್ತಗೀರ್ ಮತ್ತು ಕಾಂ. ಅಂಜಪ್ಪ ಅವರು ವಹಿಸಿದ್ದರು.

ಆಯ್ಕೆಯಾದ ನೂತನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ವಸತಿಹೀನ ಬಡ ಕುಟುಂಬಗಳ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸಿ, ಈ ಸಮಸ್ಯೆಯ ಪರಿಹಾರಕ್ಕೆ ತಮ್ಮ ಕೈಲಾದ ಪ್ರಯತ್ನ ನಡೆಸುತ್ತೇವೆಂದು ವಾಗ್ದಾನ ನೀಡಿದ್ದಾರೆ.

●

ಹಳಿಯಾಳ ರೈತ ಕೂಲಿಕಾರರ ಸಂಘದ ಸಭೆ

ಉ. ಕ. ಜಿಲ್ಲೆಯ ಹಳಿಯಾಳ ತಾಲ್ಲೂಕು ರೈತ ಕೂಲಿಕಾರರ ಸಂಘದ ಸಭೆಯು ತಾ. 20-7-79 ರಂದು ಆಲೂರು ಗ್ರಾಮದಲ್ಲಿ ಸೇರಿತ್ತು. ಸಭೆಯಲ್ಲಿ ಮೊದಲಿಗೆ ಹುತಾತ್ಮರಾದ ಮಾರುತಿ ಪವಾರರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಇವರ ಕುಟುಂಬಕ್ಕೆ ಪರಿಹಾರ ನೀಡುವುದು, ನಿರಪರಾಧಿ ರೈತರ ಮೇಲಿನ ಆರೋಪವನ್ನು ಹಿಂತೆಗೆದುಕೊಳ್ಳುವುದು, ಸಾಗುವಳಿ ಯೋಗ್ಯ ಭೂಮಿಯನ್ನು ರೈತರಿಗೆ ಹಂಚುವುದು, ಮುಂತಾದ ವಿಷಯಗಳ ಬಗ್ಗೆ ಸಭೆಯಲ್ಲಿ ಕೆಲವು ಠರಾವುಗಳನ್ನು ಸ್ವೀಕರಿಸಲಾಯಿತು. ಇದನ್ನು ತಹಸೀಲ್ದಾರರಿಗೂ ಕಳುಹಿಸಲು ತೀರ್ಮಾನಿಸಲಾಯಿತು.

○

ಬೇಡಿಕೆ ವಾರ ಆಚರಿಸಲು ಮೈಕೊ ಕಾರ್ಮಿಕರ ನಿರ್ಧಾರ

ಕಾರ್ಮಿಕ ಸಂಘದೊಡನೆ ಮಾತುಕತೆ ನಡೆಸಿ, ಕಾರ್ಮಿಕರ ನ್ಯಾಯಯುತವಾದ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಲು ಬೇಡಿಕೆಯ ವಾರವನ್ನು ಆಚರಿಸಲು ಮೈಕೊ ಕಾರ್ಮಿಕರು ತೀರ್ಮಾನಿಸಿರುವರು. ಇದರ ಅಂಗವಾಗಿ ಕಾರ್ಖಾನೆಯಲ್ಲಿ ದುಡಿಯುವ ಸುಮಾರು 6000 ಕಾರ್ಮಿಕರು ಬ್ಯಾಡ್ಜ್‌ಗಳನ್ನು ಧರಿಸಿ, ಗೇಟಿನ ಮುಂದೆ ಘೋಷಣೆಗಳನ್ನು ಕೂಗಲು ತೀರ್ಮಾನಿಸಿರುವರು. ಮೈಕೊ ಕಾರ್ಮಿಕ ಸಂಘದ ಅಧ್ಯಕ್ಷರಾದ ಕಾಂ. ಎಸ್. ಸೂರ್ಯನಾರಾಯಣ ರಾವ್ ಅವರು ಮ್ಯಾನೇಜ್‌ಮೆಂಟು ತನ್ನ ಕಾರ್ಮಿಕ ವಿರೋಧಿ ನಿಲುಮೆಯನ್ನು ಬಿಟ್ಟು, ಮಾತುಕತೆನಡೆಸಿ ಸಮಸ್ಯೆಗಳನ್ನು ಪರಿಹರಿಸುವಂತೆಯೂ, ಕಾರ್ಮಿಕರಿಗೆ ಕೊಡುವ ಕಿರುಕುಳವನ್ನು ನಿಲ್ಲಿಸುವಂತೆಯೂ ಆಗ್ರಹಪಡಿಸಿದ್ದಾರೆ. ಒಗ್ಗಟ್ಟು, ಶಿಸ್ತು ಮತ್ತು ಶಾಂತಿಯನ್ನು ಕಾಪಾಡಿ, ಹೋರಾಟ ನಡೆಸಲು ಅಧ್ಯಕ್ಷರು ಕಾರ್ಮಿಕರಿಗೆ ಕರೆಯಿತ್ತಿರುವರು.

●

ಇಂದಿರಾ ಜನಪ್ರಿಯತೆ

ಜುಲೈ 14 ರಂದು ಇಂದಿರಾಗಾಂಧಿ ಬೆಂಗಳೂರಿಗೆ ಬಂದಾಗ ವಿಮಾನ ನಿಲ್ದಾಣದಿಂದ ಹಿಡಿದು ಕುಮಾರ ಕೃಪಾ ಅತಿಥಿ ಗೃಹದ ತನಕ ಜನ ಸಂದಣಿಯು ಸೇರಿತ್ತೆಂದೂ, ಜನರನ್ನು ಆಕರ್ಷಿಸುವುದರಲ್ಲಿ ತನ್ನ ಮೇಲ್ಗೈಯನ್ನು ಇಂದಿರಾ ತೋರಿಸಿರುವರೆಂದೂ ಕೆಲವು ಪತ್ರಿಕೆಗಳಲ್ಲಿ ವರದಿಯಾಗಿತ್ತು. ನೆರೆದ ಜನರನ್ನು ಯಾರು ಹೇಗೆ ಕರೆದುಕೊಂಡು ಬಂದರು, ಏನು ಆಮಿಷ ತೋರಿಸಿದರೆಂಬುದರಿಂದ ಅಷ್ಟು ಜನಸಂದಣಿ ಸೇರಲು ಹೇಗೆ ಸಾಧ್ಯ ಎಂಬುದು ತಿಳಿಯುತ್ತೆ. ಅಂದು ಜನ ತೆಗೆದುಕೊಂಡು ಬಂದ, ವಿಮಾನ ನಿಲ್ದಾಣದ ಹೊರಗಿದ್ದ ವಾಹನಗಳ ಸಂಖ್ಯೆ: 362 ಕಾರುಗಳು; 6 ನಗರ ಸಾರಿಗೆ ಬಸ್‌ಗಳು; 4 ಸ್ಪೆಶಲ್ ಬಸ್‌ಗಳು; ದಾರಿಯಲ್ಲಿ ಜನಸೇರಿಸಲು ಇನ್ನೆಷ್ಟೊ ವಾಹನಗಳಲ್ಲಿ ಜನ ತರಲಾಗಿದೆಯೆಂದು ವೀಕ್ಷಕರು ಹೇಳುತ್ತಲಿರುವರು.

ಕಾರ್ಮಿಕ ಸಂಘದ ಅಧ್ಯಕ್ಷರ ಮೇಲೆ ಹಲ್ಲೆ

ಚಿಕ್ಕಮಗಳೂರು ಜಿಲ್ಲೆಯ ಕುದುರೆಮುಖ ಕಬ್ಬಿಣದ ಅದಿರು ಯೋಜನೆಯ ಹಿಂದುಸ್ತಾನ್ ಸ್ಟೀಲ್ ಕನ್‌ಸ್ಟ್ರಕ್ಷನ್ಸ್ ಲಿಮಿಟೆಡ್‌ನ ಸಿ.ಐ.ಟಿ.ಯು.ಗೆ ಸೇರಿದ ಹೆಚ್.ಎಸ್.ಸಿ.ಎಲ್. ನೌಕರರ ಸಂಘದ ಅಧ್ಯಕ್ಷರಾದ ಶ್ರೀ ಕೆ. ರಾಮದಾಸ್ ಆಚಾರಿ ಅವರ ಮೇಲೆ ಅಕೌಂಟ್ಸ್ ಇಲಾಖೆಯ ಜ್ಯೂನಿಯರ್ ಅಸಿಸ್ಟೆಂಟ್ ಶ್ರೀ ಶ್ರೀವಾಸ್ತವ ಅವರು ಅಕೌಂಟ್ಸ್ ಕಚೇರಿಯ ಒಳಗೇ ಹಲ್ಲೆ ನಡೆಸಿದ್ದಾರೆ. ಈ ಘಟನೆಯನ್ನು ಖಂಡಿಸಿ, ಇದರ ಬಗ್ಗೆ ಕ್ರಮಕೈಗೊಳ್ಳಬೇಕೆಂದು ಕಾರ್ಮಿಕಸಂಘದ ಕಾರ್ಯಕಾರಿ ಸಮಿತಿ ಆಡಳಿತಕ್ಕೆ ಮನವಿ ಮಾಡಿದೆ. ಸಿ.ಐ.ಟಿ.ಯು.ಗೆ ಸೇರಿದ ಈ ಸಂಘದ ಕಾರ್ಯ ನಡೆಸುವವರ ಬಗ್ಗೆ ಆಡಳಿತ ಕೆಟ್ಟದೃಷ್ಟಿ ಹೊಂದಿದ್ದು ಕಿರುಕುಳ ಕೊಡುತ್ತಿದೆ. ಈ ಬಗ್ಗೆ ಮಾರ್ಕ್ಸ್‌ವಾದಿ ಪಕ್ಷದ ಸಂಸತ್ ಸದಸ್ಯರಾದ ಕಾಂ. ಸಮರ ಮುಖರ್ಜಿಯವರಿಗೆ ಒಂದು ಪತ್ರವನ್ನೂ ಬರೆಯಲಾಗಿದ್ದು ಅವರ ಆದೇಶವನ್ನು ನಿರೀಕ್ಷಿಸಲಾಗಿದೆ.

●

ಕೋಣಿ ಬೀಡಿ ಕೆಲಸಗಾರರ ಸಭೆ

ದ.ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಕೋಣಿಗ್ರಾಮದ ಆಸುಪಾಸಿನ ಪ್ರದೇಶದ ಬೀಡಿ ಕಾರ್ಮಿಕರ ಸಭೆಯು ತಾ 15.7.79 ರಂದು ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಕಾಂ. ಅಬ್ರಹಾಂ ಕರ್ಕಡ ಅವರು ವಹಿಸಿದ್ದರು. ಬೀಡಿ ಕೆಲಸಗಾರರ ಹಿತರಕ್ಷಣೆಗಾಗಿ ಹೋರಾಡಲು ಕೋಣಿ ಪ್ರದೇಶ ಬೀಡಿ ಕೆಲಸಗಾರರ ಸಂಘವನ್ನು ಸ್ಥಾಪಿಸಲಾಯಿತು. ಸಭೆಯಲ್ಲಿ ಕಾಂ. ಸಿ.ನಾರಾಯಣ ಅವರು ಉಪಸ್ಥಿತರಿದ್ದರು. ನಂತರ ಕಾರ್ಯಕಾರಿ ಸಮಿತಿಯನ್ನು ಆರಿಸಲಾಯಿತು.

●

ಆವರಿ ಇಂಡಿಯ ಕಾರ್ಮಿಕರ ಸಾಂಕೇತಿಕ ಮುಷ್ಕರ

ಆವರಿ ಇಂಡಿಯ ಕಾರ್ಮಿಕ ಸಂಘಟನೆಗಳ ದಕ್ಷಿಣ ಭಾರತ ಸಮನ್ವಯ ಸಮಿತಿಯ ಕರೆಯ ಮೇರೆಗೆ 23-7-79 ರಂದು ಒಂದು ದಿನದ ಸಾಂಕೇತಿಕ ಮುಷ್ಕರವನ್ನು ಯಶಸ್ವಿಯಾಗಿ ನಡೆಸಲಾಯಿತು. ಈ ಮುಷ್ಕರದಲ್ಲಿ ಫೋರ್‌ಮನ್ ಮತ್ತು ಸೇಲ್ಸ್ ರೆಪ್ರೆಸೆಂಟೇಟಿವ್‌ಗಳೂ ಭಾಗವಹಿಸಿದ್ದರು. ಕಾರಣವಿಲ್ಲದೆ ಕೆಲಸದಿಂದ ವಜಾ ಮಾಡುವುದು, ವರ್ಗಾಯಿಸುವುದು, ಸಂಘದೊಡನೆ ಮಾತುಕತೆ ನಡೆಸಿ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಲು ಮ್ಯಾನೇಜ್‌ಮೆಂಟು ನಿರಾಕರಿಸುವುದು ಮೊದಲಾದುವುಗಳ ವಿರುದ್ಧ ಈ ಕಾರ್ಯಾಚರಣೆಯು ನಡೆದಿದೆ. ನ್ಯಾಯ ದೊರೆಯದಿದ್ದಲ್ಲಿ, ಅನಿರ್ದಿಷ್ಟವಾಗಿ ಮುಷ್ಕರ, ಹೋರಾಟಗಳನ್ನು ಮುಂದುವರಿಸಲಾಗುವುದೆಂದು ಎಚ್ಚರಿಕೆ ಕೊಡಲಾಗಿದೆ.

○

ಮಂಗಳೂರು ರಿಕ್ಷಾ ಚಾಲಕರ ಪ್ರತಿಭಟನೆ

ದ. ಕ. ಜಿಲ್ಲಾ ರಿಕ್ಷಾ ಚಾಲಕರ ಮತ್ತು ಮಾಲಕರ ಸಂಘದ ಉಪ ಕಾರ್ಯದರ್ಶಿ ಶ್ರೀ ಸುರೇಶ್‌ಮಲ್ಯರ ಮೇಲೆ ಜುಲೈ 16ರಂದು ರಾತ್ರಿ 9ಕ್ಕೆ ಹಲ್ಲೆ ನಡೆದ ಘಟನೆಯನ್ನು ಪ್ರತಿಭಟಿಸಿ ತಾ. 17ರಂದು ರಿಕ್ಷಾ ಚಾಲಕರೆಲ್ಲರೂ ಮಂಗಳೂರು ನಗರದಲ್ಲಿ ಮಿಂಚಿನ ಮುಷ್ಕರ ನಡೆಸಿದರು. ಶ್ರೀಯುತ ಸುರೇಶ್‌ಮಲ್ಯರ ಮೇಲೆ ಅನ್ಯಾಯವಾಗಿ ಕೈಮಾಡಿದ ಸಿಟಿ ಬಸ್ ಕಂಟ್ರಾಕ್ಟ್ ಮಾಲಕ ಬಾಲಕೃಷ್ಣ ಎಂಬವರನ್ನು ದಸ್ತಗಿರಿ ಮಾಡಿ ಕ್ಷಮಾಪಣೆ ಕೇಳಬೇಕೆಂಬುದೇ ರಿಕ್ಷಾ ಚಾಲಕರ ನ್ಯಾಯವಾದ ಬೇಡಿಕೆ. ಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಮಾಧವ ಶೆಟ್ಟಿಯವರು ದ.ಕ. ಜಿಲ್ಲಾ ಪೋಲೀಸ್ ಅಧಿಕಾರಿಗಳಿಗೆ ದೂರು ಸಲ್ಲಿಸಿದರು ಮತ್ತು ವಿವರಗಳನ್ನಿತ್ತರು.

ಈ ಬೇಡಿಕೆಯ ನ್ಯಾಯವನ್ನು ಮನಗಂಡ ಜಿಲ್ಲಾ ಪೋಲೀಸ್ ಸುಪರಿನ್‌ಟೆಂಡೆಂಟರು ಕೂಡಲೇ ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರರನ್ನು ಕಳುಹಿಸಿ ಸದ್ರಿ ಬಾಲಕೃಷ್ಣರನ್ನು ದಸ್ತಗಿರಿ ಮಾಡಿ (ಬಸ್ ಸಹಿತ) ಎಸ್. ಪಿ. ಆಫೀಸಿಗೆ

[8ನೇ ಪುಟ ನೋಡಿ]

ಆರ್ಥಿಕ ಸಮೀಕ್ಷೆ:

ಸಾರ್ವಜನಿಕ ವಿತರಣೆಯ ಸಮಸ್ಯೆಗಳು

—ಆರ್. ಚಂದ್ರ

ಹೊಸ ಯೋಜನೆಗೆ ಸ್ವಾಗತ:

ಜೀವನಾವಶ್ಯಕ ಸಾಮಗ್ರಿಗಳನ್ನು ದೇಶಾದ್ಯಂತ ಜನಸಾಮಾನ್ಯರಿಗೆ, ಮುಖ್ಯವಾಗಿ ದುರ್ಬಲ ವರ್ಗದವರಿಗೆ ನ್ಯಾಯ ಹಾಗೂ ಸುಲಭ ಬೆಲೆಗಳಲ್ಲಿ ಒದಗಿಸಿಕೊಡಲು ಸಾರ್ವಜನಿಕ ವಿತರಣಾ ವ್ಯವಸ್ಥೆಯು ಜುಲೈ 1 ರಿಂದ ಜಾರಿಗೆ ಬಂದಿರುವುದೇನೋ ಸಂತೋಷ ಮತ್ತು ಸ್ವಾಗತ. ಕೇಂದ್ರ ವಾಣಿಜ್ಯ ಮತ್ತು ನಾಗರಿಕ ಪೂರೈಕೆಯ ಮಂತ್ರಿ, ಶ್ರೀ ಮೋಹನ್‌ಧಾರಿಯ ಅವರ ಹೇಳಿಕೆಯಂತೆ, ಹೊಸ ಯೋಜನೆಯು ಕೇವಲ ವಿತರಣಾ ವ್ಯವಸ್ಥೆಯಾಗಿರದೆ, "ಉತ್ಪಾದನಾ ಹಾಗೂ ಸಾರ್ವಜನಿಕ ವಿತರಣಾ ವ್ಯವಸ್ಥೆ"ಯಾಗಿದೆ. ಅಂದರೆ, ಅವಶ್ಯಕ ವಸ್ತುಗಳ ಉತ್ಪಾದನೆಯಿಂದ ಹಿಡಿದು, ಖರೀದಿ, ಸಂಗ್ರಹಣೆ, ಸಾರಿಗೆ ಮತ್ತು ಗ್ರಾಹಕರಿಗೆ ವಿತರಣೆ ಮಾಡುವ ವರೆಗಿನ ಕಾರ್ಯಕ್ರಮಗಳ ಹೊಣೆಹೊತ್ತ ಹೊಸ ವ್ಯವಸ್ಥೆಯಾಗಿದೆ. ಮಂತ್ರಿಗಳ ಹೇಳಿಕೆಯಂತೆ, ಕೇಂದ್ರ ಹಾಗೂ ರಾಜ್ಯ ಸರಕಾರಗಳೂ ಯೋಜನಾ ಆಯೋಗವೂ ಈ ಯೋಜನೆಯನ್ನು ಕಾರ್ಯರೂಪಕ್ಕಿಳಿಸಲು ಮತ್ತು ಅದನ್ನು ಯಶಸ್ವಿಗೊಳಿಸಲು ಕಟಿಬದ್ಧವಾಗಿವೆ. ಸಾರ್ವಜನಿಕ ವಿತರಣಾ ವ್ಯವಸ್ಥೆಯು ಬೆಲೆನಿಯಂತ್ರಣದ ಒಂದು ಪರಿಣಾಮಕಾರಿ ವಿಧಾನವಾಗಿದ್ದು ರಾಷ್ಟ್ರೀಯ ಐಕ್ಯಮತ್ಯ ಹಾಗೂ ಆರ್ಥಿಕ ವ್ಯವಸ್ಥೆಯ ಒಂದು ಅವಿಭಾಜ್ಯ ಅಂಗವಾಗಿದೆ ಎಂದು ಮಂತ್ರಿಗಳೂ, ಸಂಬಂಧಪಟ್ಟ ವಕ್ತಾರರೂ ಘೋಷಿಸಿದ್ದಾರೆ.

ಜೀವನಾವಶ್ಯಕ ಸಾಮಗ್ರಿಗಳನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಜನಸಾಮಾನ್ಯರಿಗೆ ಸದಾ ಕಾಲವೂ ದೇಶಾದ್ಯಂತ ಸಮಾನ ಬೆಲೆಗಳಲ್ಲಿ ಒದಗಿಸಬೇಕೆಂಬುದು ಎಲ್ಲಾ ಪ್ರಜಾಸತ್ತಾತ್ಮಕ ಮತ್ತು ಎಡ ರಾಜಕೀಯ ಪಕ್ಷಗಳ ಮತ್ತು ಸಂಘಸಂಸ್ಥೆಗಳ ಬೇಡಿಕೆಗಳಾಗಿವೆ, ಮತ್ತು ಅವುಗಳ ಕಾರ್ಯಕ್ರಮಗಳಲ್ಲಿ ಒಂದಾಗಿದೆ. ಪ. ಬಂಗಾಳ ಮತ್ತು ತ್ರಿಪುರಾಗಳಲ್ಲಿ ಎಡರಂಗ ಸರಕಾರಗಳು ಅಧಿಕಾರಕ್ಕೆ ಬಂದಂದಿನಿಂದ, 8-10 ಜೀವನಾವಶ್ಯಕ ಸಾಮಗ್ರಿಗಳನ್ನಾದರೂ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಶ್ರೀ ಸಾಮಾನ್ಯರಿಗೆ ಒದಗಿಸಬೇಕೆಂದೂ ಅದಕ್ಕಾಗಿ ಕೇಂದ್ರ ಸರಕಾರವು ರಾಜ್ಯ ಸರಕಾರಗಳಿಗೆ ಸಾಕಷ್ಟು ನೆರವು ನೀಡಬೇಕೆಂದೂ ಒತ್ತಾಯಿಸುತ್ತಲೇ ಇವೆ. ಹೀಗಾಗಿ, ಕೇಂದ್ರ ಸರಕಾರವು ರೂಪಿಸಿದ ಹೊಸ 'ಉತ್ಪಾದನಾ ಹಾಗೂ ಸಾರ್ವಜನಿಕ ವಿತರಣಾ ಯೋಜನೆ'ಯನ್ನು ಪ. ಬಂಗಾಳ ಮತ್ತು ತ್ರಿಪುರಾ ರಾಜ್ಯಗಳೂ ಸೇರಿ 17 ರಾಜ್ಯ ಸರಕಾರಗಳೂ 6 ಕೇಂದ್ರಾಡಳಿತ ಪ್ರದೇಶಗಳೂ ಈಗಾಗಲೇ ಜಾರಿಗೊಳಿಸಲು ಮುಂದೆ ಬಂದಿವೆ.

ವೈರುಧ್ಯಗಳು:

ಆದರೆ, ಲೆನಿನ್ ಹೇಳಿದಂತೆ, ಬಂಡವಾಳಶಾಹಿ ಪ್ರಭುತ್ವದಲ್ಲಿ ಯೋಜನೆಗಳೆಲ್ಲವೂ ತೋರಿಕೆಗೆ ಸದುದ್ದೇಶಿತ ಹಾಗೂ ಆತ್ಮಾಕರ್ಷಕವಾಗಿರುವುವು. ಅತ್ಯುತ್ತಮವಾದ ಯೋಜನೆಗಳನ್ನು ಕಾಗದದ ಮೇಲೆ ತಯಾರಿಸುವುದರಲ್ಲಿ ಅಧಿಕಾರಿಶಾಹಿಗಳದ್ದಂತೂ ಎತ್ತಿದ ಕೈ! ಯೋಜನೆಗಳನ್ನು ತಯಾರಿಸುವುದು, ಅವುಗಳನ್ನು ಪುನರ್ವಿಮರ್ಶಿಸುವುದು, ಹೊಸ ಯೋಜನೆಗಳನ್ನು ತಯಾರಿಸುವುದು, ಇತ್ಯಾದಿಗಳಿಂದ ಅಧಿಕಾರಿಶಾಹಿಗಳ ಸಂತಾನ ಬೆಳೆಯುತ್ತಾ ಹೋಗುತ್ತಿದೆ. ಆದುದರಿಂದ, ಸಧ್ಯದ ಆರ್ಥಿಕ-ರಾಜಕೀಯ ಪರಿಸ್ಥಿತಿಯಲ್ಲಿ ಸಾರ್ವಜನಿಕ ವಿತರಣಾ ಯೋಜನೆಯು ಎಷ್ಟರ ಮಟ್ಟಿಗೆ ಯಶಸ್ವಿಯಾದೀತು, ಅದರ ಮುಖ್ಯ ಸಮಸ್ಯೆಗಳೇನು ಎಂದು ಪರಿಶೀಲಿಸೋಣ.

ಪ್ರಾರಂಭದಲ್ಲಿ ಯುದ್ಧ, ಬರಗಾಲ, ನೆರೆ ಮುಂತಾದ ಅನಾಹುತಗಳಿಂದ ಉಂಟಾದ ಕೊರತೆ ಪರಿಸ್ಥಿತಿಗಳಲ್ಲಿ ಅವಶ್ಯಕ ವಸ್ತುಗಳನ್ನು ಸಾರ್ವಜನಿಕ ವಿತರಣೆಯ ಮೂಲಕ ಜನಸಾಮಾನ್ಯರಿಗೆ ಒದಗಿಸಲಾಗುತ್ತಿತ್ತು. ಅದು ಹೆಚ್ಚಾಗಿ ನಗರಗಳಿಗೂ ಕೈಗಾರಿಕಾ ಕೇಂದ್ರಗಳಿಗೂ ಸೀಮಿತವಾಗಿತ್ತು. ಕಾರಣ, ಪ್ರಕ್ಷುಬ್ಧ ಪರಿಸ್ಥಿತಿಗಳಲ್ಲಿ ಅಲ್ಲಿನ ಜನರು ದಂಗೆ ಏಳದಿರಲಿ ಮತ್ತು ಬಂಡವಾಳಶಾಹಿ ಪದ್ಧತಿಗೆ ಆಘಾತವಾಗದಿರಲಿ ಎಂಬ ಮುನ್ನೆಚ್ಚರಿಕೆಯಿಂದ ಸರಕಾರ ಅಂತಹ ವಿಶೇಷ ಹೊಣೆಗಾರಿಕೆಯನ್ನು ವಹಿಸಿಕೊಳ್ಳುತ್ತಿತ್ತು. ಪರಿಸ್ಥಿತಿ ಸುಧಾರಿಸುತ್ತಲೇ ಪುನಃ ಖಾಸಗೀ ವ್ಯಾಪಾರವನ್ನೇ ಮುಕ್ತವಾಗಿ ನಡೆಯಗೊಡಲಾಗುತ್ತಿತ್ತು. ಕೊರತೆಯ ಪರಿಸ್ಥಿತಿಗಳಲ್ಲಿ ಭೂಮಾಲಕರೂ, ದೊಡ್ಡ ಕೈಗಾರಿಕೋದ್ಯಮಿಗಳೂ, ವ್ಯಾಪಾರಿಗಳೂ ಹೆಚ್ಚಾಗಿ ಕಾಳಸಂತೆಯಲ್ಲಿ ನಿರತರಾಗಿದ್ದು ಅತಿ ಲಾಭಗಿಟ್ಟಿಸುತ್ತಿದ್ದರೆ, ಸುಭಿಕ್ಷೆಯ ಪರಿಸ್ಥಿತಿಗಳಲ್ಲಿ ಇವರು ತಮ್ಮ ಏಕಸ್ವಾಮ್ಯದ ಬಲದಿಂದ ಉತ್ಪಾದನೆ ಮತ್ತು ವಿತರಣೆಗಳಲ್ಲಿ ಉದ್ದೇಶಪೂರ್ವಕವಾಗಿ ಕೃತಕ ಕೊರತೆ ಸೃಷ್ಟಿಮಾಡಿ ಅಧಿಕ ಲಾಭ ಗಿಟ್ಟಿಸುತ್ತಿರುವರು. ಜನಸಾಮಾನ್ಯರನ್ನು ಖಾಸಗೀ ಉದ್ದಿಮೆಯ ಶೋಷಣೆಯಿಂದ ಸ್ವಲ್ಪಮಟ್ಟಿಗೆ ಪಾರುಮಾಡುವ ಉದ್ದೇಶದಿಂದ ಸರ್ವಕಾಲದಲ್ಲಿಯೂ ಕೆಲವೊಂದು ಜೀವನಾವಶ್ಯಕ ವಸ್ತುಗಳನ್ನು ಸಾರ್ವಜನಿಕ ವಿತರಣೆಯ ಮೂಲಕ ಒದಗಿಸಿಕೊಡಲು ಇತ್ತೀಚಿನ ವರುಷಗಳಲ್ಲಿ ಕ್ರಮ ಕೈಕೊಳ್ಳಲಾಗಿದೆ. ಕಾರಣ, ಬಂಡವಾಳಶಾಹಿ ಪದ್ಧತಿಯಲ್ಲಿ 'ಲಾಭ' ದೃಷ್ಟಿಯೇ ಪ್ರಧಾನವಾದರೂ, ಅದು ಮುಂದುವರಿಯಲು ಜನಾನುರಾಗವನ್ನು ಗಳಿಸಬೇಕಲ್ಲವೆ? ಇಲ್ಲಿಯೇ ಇರುವುದು ವೈರುಧ್ಯ!

ಖಾಸಗಿ ಕೃಷಿ ಉತ್ಪಾದನೆ:

ಸಾರ್ವಜನಿಕ ವಿತರಣೆಯ ಹೊಸ ಯೋಜನೆಯ ಮೊದಲ ಹಂತದಲ್ಲಿ ಗೋದಿ, ಗೋದಿಯಿಂದ ತಯಾರಿಸಿದ ಸಾಮಗ್ರಿಗಳು, ಅಕ್ಕಿ, ದೊರಗು ಧಾನ್ಯಗಳು, ಅಡುಗೆತೈಲಗಳು, ಸೀಮೆಎಣ್ಣೆ, ಕಂಟ್ರೋಲ್‌ಬಟ್ಟೆ, ಬೆಂಕಿಪೆಟ್ಟಿಗೆ, ಒಗೆಯುವ ಸಾಬೂನ್, ಸ್ನಾನದ ಸಾಬೂನ್, ಖಾಲಿ ಪುಸ್ತಕಗಳು, ಚಹ ಮತ್ತು ಕಾಫಿ-ಹೀಗೆ 13 ಅವಶ್ಯಕ ವಸ್ತುಗಳನ್ನು ಸೇರಿಸಿಕೊಳ್ಳಲಾಗುವುದು. ಇವುಗಳಲ್ಲಿ ಈ ಮೊದಲೇ ಮೊದಲ 7 ಅವಶ್ಯಕ ವಸ್ತುಗಳು ಸಾರ್ವಜನಿಕ ವಿತರಣೆಗೆ ಒಳಗಾಗಿದ್ದವು. ನಂತರದ 6 ವಸ್ತುಗಳನ್ನು ಹೊಸತಾಗಿ ಸೇರಿಸಲಾಗಿದೆ. ಕ್ರಮೇಣ ಬೆಟರಿ ಶೆಲ್ಲುಗಳು, ಸೈಕಲ್ ಟಯರ್‌ಗಳು ಮತ್ತು ಟ್ಯೂಬುಗಳು, ಇತ್ಯಾದಿ ವಸ್ತುಗಳನ್ನು ಸೇರಿಸುವ ನಿರೀಕ್ಷೆ ಇದೆ. ರಾಜ್ಯ ಸರಕಾರಗಳು ಇನ್ನೂ ಕೆಲವು ವಸ್ತುಗಳನ್ನು ಸಾರ್ವಜನಿಕ ವಿತರಣೆಗೆ ಒಳಪಡಿಸಬಹುದಾಗಿದೆ.

ಆದರೆ, ಈ ಅವಶ್ಯಕ ವಸ್ತುಗಳನ್ನು ಸಾರ್ವಜನಿಕ ವಿತರಣೆಗೆ ಬೇಕಾದಷ್ಟು ಸಕಾಲದಲ್ಲಿ ನ್ಯಾಯ ಬೆಲೆಗೆ ಒದಗಿಸುವುದು ಹೇಗೆ? ಆಹಾರ ಧಾನ್ಯಗಳ ಉತ್ಪಾದನೆಯು ಇನ್ನೂ ಸಂಪೂರ್ಣವಾಗಿ ಖಾಸಗೀ ಕ್ಷೇತ್ರದಲ್ಲಿಯೇ ಇದೆ. ಅವುಗಳ ಸಗಟು ಮತ್ತು ಚಿಲ್ಲರೆ ವ್ಯಾಪಾರಗಳೂ ಮುಕ್ತ ಮಾರುಕಟ್ಟೆಯ ಖಾಸಗೀ ಕ್ಷೇತ್ರದಲ್ಲಿಯೇ ಇವೆ. ಆಹಾರಧಾನ್ಯಗಳ ತೀವ್ರ ಕೊರತೆಯ ಪರಿಸ್ಥಿತಿಯಲ್ಲಿ, 1973-74 ರಲ್ಲಿ ಇಂದಿರಾಗಾಂಧಿ ಸರಕಾರವು ಗೋದಿ ಸಗಟು ವ್ಯಾಪಾರವನ್ನು ಸಾರ್ವಜನಿಕ ಕ್ಷೇತ್ರಕ್ಕೆ ಸೇರಿಸಿಕೊಂಡಾಗ, ಶ್ರೀಮಂತ ರೈತರೂ ದೊಡ್ಡ ಭೂಮಾಲಕರೂ ವ್ಯಾಪಾರಕ್ಕೆ ಮೀಸಲಾಗಿರುವ ತಮ್ಮಲ್ಲಿದ್ದ ಹೆಚ್ಚುವರಿ ಧಾನ್ಯಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡದೆ, ಸರಕಾರ ದುಬಾರಿ ಬೆಲೆ ತೆರಬೇಕೆಂದು ಹಟ ತೊಟ್ಟಿದ್ದನ್ನು ಇಲ್ಲಿ ಸ್ಮರಿಸಬಹುದು. ಪರಿಣಾಮವಾಗಿ, ಸರಕಾರವು ಗೋದಿ ಸಗಟು ವ್ಯಾಪಾರವನ್ನು ಕೈಬಿಟ್ಟು, ಸಾರ್ವಜನಿಕ ವಿತರಣೆಗಾಗಿ ವಿದೇಶಗಳಿಂದ ಗೋದಿ ಆಮದು ಮಾಡಿಕೊಳ್ಳಬೇಕಾಯಿತು; ಗ್ರಾಮೀಣ ಪಟ್ಟಭದ್ರ ಹಿತಾಸಕ್ತಿಗಳೆದುರು ಸೋಲಬೇಕಾಯಿತು; ಆಹಾರಧಾನ್ಯಗಳ ಉತ್ಪಾದನೆಯು ಈಗ ಸಾಕಷ್ಟು ಇರುವುದರಿಂದ, ಅವುಗಳ ಬೆಲೆ ಕುಸಿಯದಿರುವಷ್ಟೇ ನಿಶ್ಚಿತ ಬೆಲೆಗಳಲ್ಲಿ ಸರಕಾರಿ ಸಂಸ್ಥೆಗಳು ಸ್ವಲ್ಪ ಮಟ್ಟಿಗೆ ಅವುಗಳನ್ನು ಖರೀದಿಸುತ್ತಿವೆ. ಮುಕ್ತ ಮಾರುಕಟ್ಟೆ ಮತ್ತು ಮುಕ್ತ ವ್ಯಾಪಾರದಲ್ಲಿ ನಿಷ್ಠೆ ಇರುವ ಸರಕಾರವು, ಸಾರ್ವಜನಿಕ ವಿತರಣಾ ವ್ಯವಸ್ಥೆಯು ಯಶಸ್ವಿಗಾಗಿ ಆಹಾರ ಧಾನ್ಯಗಳ ಸಗಟು ವ್ಯಾಪಾರವನ್ನು ಸಂಪೂರ್ಣವಾಗಿ ಸಾರ್ವಜನಿಕ ಕ್ಷೇತ್ರಕ್ಕೆ ತರಲು ಸಿದ್ಧವಿರಲಾರದು.

ಖಾಸಗಿ ಕೈಗಾರಿಕಾ ಉತ್ಪಾದನೆ:

ಹಾಗೆಯೇ, ಸಾರ್ವಜನಿಕ ವಿತರಣೆಗೆ ಅವಶ್ಯಕ ಕೈಗಾರಿಕಾ ಸಿದ್ಧವಸ್ತುಗಳನ್ನು ಒದಗಿಸುವುದೂ ಒಂದು ದೊಡ್ಡ ಸಮಸ್ಯೆಯೇ ಸರಿ. ಇಂದಿಗೂ ಶೇ. 80-85 ರಷ್ಟು ಕೈಗಾರಿಕಾ ವಸ್ತುಗಳ ಉತ್ಪಾದನೆಯು ಖಾಸಗೀ ಕ್ಷೇತ್ರದಲ್ಲಿಯೇ ನಡೆಯುತ್ತಿರುವುದರಿಂದ, ನಿಗದಿಯಾದ ಬೆಲೆಗಳಲ್ಲಿ ಸಾರ್ವಜನಿಕ ವಿತರಣೆಗಾಗಿ ಯಾರು ಒದಗಿಸಬಲ್ಲರು? ಕಂಟ್ರೋಲ್ ಬಟ್ಟೆಯನ್ನು ಖಾಸಗೀ ಕ್ಷೇತ್ರದಲ್ಲಿ ಉತ್ಪಾದಿಸಲು ಸರಕಾರ ನಿರ್ದೇಶಿಸಿದುದನ್ನು ಗಿರಣಿ ಮಾಲಕರು ಈ ಹಿಂದೆ ಯಶಸ್ವಿಯಾಗಿ ಉಲ್ಲಂಘಿಸಿದ್ದರು. 1976-77 ರಲ್ಲಿ ಕಂಟ್ರೋಲ್ ಬಟ್ಟೆಗಳ ದರಗಳನ್ನು ಶೇ. 35 ರಷ್ಟು ಹೆಚ್ಚಿಸಿದರೂ, ಅವುಗಳ ಉತ್ಪಾದನೆಯು ಖಾಸಗೀ ಕ್ಷೇತ್ರದಲ್ಲಿ 800 ಮಿ. ಚ. ಮೀ. ಗಳ ಬದಲು ಕೇವಲ 300 ಮಿ. ಚ. ಮೀ. ಗಳಾಗಿತ್ತು. ನಿರುಪಾಯವಾಗಿ, ಈಗ ಹೆಚ್ಚು ಲಾಭಕರವಲ್ಲದ ಕಂಟ್ರೋಲ್ ಬಟ್ಟೆ ಉತ್ಪಾದನೆಯನ್ನು ಸರಕಾರೀ ಕ್ಷೇತ್ರದಲ್ಲಿಯೇ ನಡೆಸಲಾಗುತ್ತಿದೆ. ಹೀಗಾಗಿ, ಸಾರ್ವಜನಿಕ ಕ್ಷೇತ್ರದಲ್ಲಿರುವ ಕಂಟ್ರೋಲ್ ಬಟ್ಟೆ ಮತ್ತು ಸೀಮೆ ಎಣ್ಣೆ ಇವೆರಡನ್ನು ವಿತರಣೆಗೆ ಒದಗಿಸಲು ಹೆಚ್ಚು ಸಮಸ್ಯೆಯಾಗಲಾರದು. ಕೆಲವೊಂದು ಅವಶ್ಯಕ ಕೈಗಾರಿಕಾ ವಸ್ತುಗಳನ್ನು ಸಣ್ಣ ಕೈಗಾರಿಕಾ ಸಂಸ್ಥೆಗಳಿಂದಲೂ, ಖಾದಿ ಮತ್ತು ಗ್ರಾಮೋದ್ಯೋಗ ಸಂಸ್ಥೆಯಿಂದಲೂ ಪಡೆಯಲು ನಿರ್ಧರಿಸಲಾಗಿದೆ. ಪ್ರತಿ ರಾಜ್ಯಗಳಲ್ಲಿಯೂ ಸಾರ್ವಜನಿಕ ವಿತರಣೆಗೆ ಅಗತ್ಯವಿರುವ ಕೈಗಾರಿಕಾ ವಸ್ತುಗಳನ್ನು ಕೆಲವು ಕೈಗಾರಿಕಾ ಸಂಸ್ಥೆಗಳಿಂದ ನಿರ್ದಿಷ್ಟ ಸಗಟು ದರಗಳಲ್ಲಿ ಖರೀದಿಸಲು ನಿಶ್ಚಯಿಸಲಾಗಿದೆ. ಆದರೆ, ಇಲ್ಲಿ ಇನ್ನೊಂದು ಸಮಸ್ಯೆ. ಕೈಗಾರಿಕಾವಸ್ತುಗಳನ್ನು ಖರೀದಿ ಮಾಡುವಾಗ, ಉತ್ಪಾದಕರ ಬಂಡವಾಳಕ್ಕೆ ಯೋಗ್ಯ ಪ್ರತಿಫಲ ಬರುವಂತೆಯೂ ನೋಡಿಕೊಳ್ಳಬೇಕು; ವಿತರಣೆ ಮಾಡುವಾಗ ಗ್ರಾಹಕರ ಕೊಳ್ಳುವ ಸಾಮರ್ಥ್ಯಕ್ಕನುಗುಣವಾಗಿ ನ್ಯಾಯ ಬೆಲೆಗಳಲ್ಲಿ ಅವುಗಳನ್ನು ಒದಗಿಸಬೇಕು. ಈ ಎರಡೂ ಉದ್ದೇಶಗಳು ಪರಸ್ಪರ ವಿರುದ್ಧವಾದುದರಿಂದ, ಎರಡೂ ಸಂದರ್ಭಗಳಲ್ಲಿ ಸರಕಾರದ ಉದಾರ ಸಹಾಯಧನದಿಂದ ಮಾತ್ರ ಈ ಎರಡೂ ಉದ್ದೇಶಗಳನ್ನು ಸಾಧಿಸಬಹುದು. ಆದರೆ, ಇದರಿಂದಾಗಿ ಸರಕಾರದ ಸಂಪನ್ಮೂಲಗಳು ಆರ್ಥಿಕ ಅಭಿವೃದ್ಧಿ, ಉತ್ಪಾದನೆಗಳಿಗೆ ಸಿಗುವುದು ಕಡಿಮೆಯಾದೀತೆಂಬ ಭಯವೂ ಇದೆ.

ಖಾಸಗಿವಿತರಣೆ:

ಹೊಸ ಸಾರ್ವಜನಿಕ ವಿತರಣೆಯಂತೆ, ದೇಶಾದ್ಯಂತ ಕನಿಷ್ಠ ಪ್ರತಿ 2000 ಜನಸಂಖ್ಯೆಗೆ ಒಂದು ನ್ಯಾಯ ಬೆಲೆ ಅಂಗಡಿಯನ್ನು ತೆರೆದು ಈ ಅವಶ್ಯಕ ವಸ್ತುಗಳನ್ನು ಎಲ್ಲೆಡೆಗಳಲ್ಲಿಯೂ ಸಾಧ್ಯವಿದ್ದಷ್ಟು ಸಮಾನ ಬೆಲೆಗಳಲ್ಲಿ ಒದಗಿಸಲಾಗುವುದೆಂದು ತಿಳಿಸಲಾಗಿದೆ. ಗುಡ್ಡಗಾಡು ಪ್ರದೇಶಗಳಲ್ಲಿ ಸಾರಿಗೆ ಸಂಪರ್ಕದ ಅನಾನುಕೂಲತೆ ಇರುವುದರಿಂದ ಕನಿಷ್ಠ ಪ್ರತಿ 1000 ಜನರಿಗೆ ಒಂದು ನ್ಯಾಯ ಬೆಲೆ ಅಂಗಡಿಯನ್ನು ತೆರೆಯಲಾಗುವುದು. ಅಧಿಕೃತವಲಯಗಳ ಅಂದಾಜಿನಂತೆ, ಹೊಸ ಯೋಜನೆಗೆ 3.5 ಲಕ್ಷ ಅಂಗಡಿಗಳು ಬೇಕಾಗಬಹುದು. ಈಗಾಗಲೇ 2.47 ಲಕ್ಷ ಅಂಗಡಿಗಳಿರುವುದರಿಂದ, ಇನ್ನೂ ಸುಮಾರು 1 ಲಕ್ಷ ಅಂಗಡಿಗಳನ್ನು ತೆರೆಯಬೇಕಾಗುವುದು. ಈಗಿರುವ 2.47 ಲಕ್ಷ ಚಿಲ್ಲರೆ ಅಂಗಡಿಗಳಲ್ಲಿ, 1.87 ಲಕ್ಷ ಅಂಗಡಿಗಳು ಖಾಸಗಿ ಅಂಗಡಿಗಳಾಗಿವೆ. ಉಳಿದ 60 ಸಾವಿರ ಅಂಗಡಿಗಳು ಸಹಕಾರಿ ಅಥವಾ ಸರಕಾರಿ ಕ್ಷೇತ್ರಗಳಲ್ಲಿವೆ. ಸಾರ್ವಜನಿಕ ವಿತರಣೆಗೆ ಹೊಸ ಅಂಗಡಿಗಳನ್ನು ಸರಕಾರಿ ಅಥವಾ ಸಹಕಾರಿ ಕ್ಷೇತ್ರದಲ್ಲಿ ತೆರೆಯಲು ಉದ್ದೇಶಿಸಲಾಗಿದೆ. ಗ್ರಾಮ ಪಂಚಾಯತುಗಳಿಂದಲೂ ಇಂತಹ ಅಂಗಡಿಗಳನ್ನು ನಡೆಸಲು ಸಾಧ್ಯತೆ ಇದೆ. ನಿರುದ್ಯೋಗಿ ಯುವಜನರಿಗೆ, ಮುಖ್ಯವಾಗಿ ಪರಿಶಿಷ್ಟ ಜಾತಿ ಮತ್ತು ಜನಾಂಗದ ಯುವಜನರಿಗೆ ಹೊಸ ಅಂಗಡಿಗಳನ್ನು ತೆರೆಯಲು ಸಾಕಷ್ಟು ಪ್ರೋತ್ಸಾಹ ನೀಡುವುದಾಗಿ ಹೇಳಲಾಗಿದೆ.

ಉದ್ದೇಶಿತ 3.5 ಲಕ್ಷ ಅಂಗಡಿಗಳೂ, ದೇಶದ ಒಟ್ಟು 33 ಲಕ್ಷ ಚಿಲ್ಲರೆ ಅಂಗಡಿಗಳ ಶೇ. 10ರಷ್ಟೇ ಆಗಿರುವುದನ್ನೂ, ಒಟ್ಟು ರೂ. 36,000 ಕೋಟಿ ಚಿಲ್ಲರೆ ವ್ಯಾಪಾರದ ಮೌಲ್ಯದಲ್ಲಿ ಇವುಗಳ ಪಾಲು ಕೇವಲ ರೂ. 3000 ಕೋಟಿ, ಶೇ. 10ರಷ್ಟು ಆಗಿರುವುದನ್ನೂ ಗಮನಿಸಬೇಕು. ದೇಶದ ಬಹುಪಾಲು ಉತ್ಪಾದನೆ ಮತ್ತು ಸಗಟು ಹಾಗೂ ಚಿಲ್ಲರೆ ವ್ಯಾಪಾರಗಳು ಖಾಸಗೀ ಕ್ಷೇತ್ರದಲ್ಲಿಯೇ ಇರುವಾಗ, ಅವುಗಳ ಪೈಪೋಟಿಯ ಎದುರು ಸಾರ್ವಜನಿಕ ವಿತರಣೆಗೆ ಒಳಪಟ್ಟ ಚಿಲ್ಲರೆ ಅಂಗಡಿಗಳು ಯಶಸ್ವಿಯಾಗಿ ತಮ್ಮ ಉದ್ದೇಶಿತ ಕಾರ್ಯ ನಿರ್ವಹಿಸಬಲ್ಲವೆ? ಇದು ತುಂಬಾ ಕಷ್ಟ ಎನ್ನುವುದರಲ್ಲಿ ಸಂಶಯವಿಲ್ಲ. ಸಾರ್ವಜನಿಕ ವಿತರಣೆಯ ಚಿಲ್ಲರೆ ಅಂಗಡಿಗಳು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಬೇಕಾದರೆ, ಸಹಕಾರಿ ಬ್ಯಾಂಕುಗಳಿಂದಲೂ, ರಾಷ್ಟ್ರೀಕೃತ ಬ್ಯಾಂಕುಗಳಿಂದಲೂ ಸಾಲ ಸಹಾಯಗಳನ್ನು ನೀಡುವುದಲ್ಲದೆ, ಸರಕಾರವೂ ಧಾರಾಳವಾಗಿ ಸಹಾಯಧನ

[7ನೇ ಪುಟ ನೋಡಿ]

ಆಡಳಿತ ಮತ್ತು ಆರ್ಥಿಕ ಅಧಿಕಾರಗಳ ವಿಕೇಂದ್ರೀಕರಣ

ಪಂಚಾಯತ್‌ರಾಜ್ ಪದ್ಧತಿಯ ಬಗ್ಗೆ ತ್ರಿಪುರಾ ಸರ್ಕಾರದ ನಿಲುವುಗಳು

1. ತ್ರಿಪುರಾ ರಾಜ್ಯದಲ್ಲಿ ಇದುವರೆಗೆ ಗ್ರಾಮಮಟ್ಟದ ಘಟಕವಾಗಿ ಮೂಲಭೂತ ಆಡಳಿತವನ್ನು ನಡೆಸುವ ಶಾಸನೋಕ್ತ ಗ್ರಾಮಪಂಚಾಯತಿಗಳಿದ್ದವು. ಪಂಚಾಯತಿರಾಜ್ಯದ ಆಡಳಿತದಲ್ಲಿ ಏಕಪಕ್ಷೀಯ ವ್ಯವಸ್ಥೆಯಾಗಿ ಗ್ರಾಮಪಂಚಾಯತಿಗಳು ಮತ್ತು ಗ್ರಾಮಸಭೆಯ ನ್ಯಾಯ ಪಂಚಾಯತಿಗಳನ್ನು 1961ರಿಂದ ನಿಧಾನವಾಗಿ ರೂಪಿಸಿ, ರಾಜ್ಯದ ಹದಿನೇಳು ಅಭಿವೃದ್ಧಿ ಬ್ಲಾಕುಗಳಲ್ಲಿರುವ ಇಡೀ ಗ್ರಾಮೀಣ ಪ್ರದೇಶವನ್ನು ಆವರಿಸುವ ಯೋಜನೆ ರೂಪಿಸಲಾಯಿತು. ಆದರೆ ಅಧಿಕಾರದಲ್ಲಿದ್ದ ಸರ್ಕಾರಗಳಿಗೆ ಪ್ರಜ್ಞಾಪೂರ್ವಕ ಬದ್ಧತೆಯ ಕೊರತೆಯಿದ್ದುದರಿಂದ 1978ರವರೆಗೂ ಪಂಚಾಯತಿಗಳು ಸ್ಥಗಿತವಾಗಿದ್ದವು.

2. 1978ರ ಜನವರಿಯಲ್ಲಿ ಜನತೆಯ ಬೆಂಬಲದಿಂದ ಅಧಿಕಾರಕ್ಕೆ ಬಂದ ತ್ರಿಪುರಾರಾಜ್ಯದ ವಾಮರಂಗ ಸರ್ಕಾರವು, ಅಧಿಕಾರವನ್ನು ವಿಕೇಂದ್ರೀಕರಿಸುವ ಪ್ರತಿಜ್ಞೆಯನ್ನು ಪೂರೈಸಲು ತೊಡಗಿದೆ. ಹಳ್ಳಿಗರ ನಂಬಿಕೆಯನ್ನು ಸಂಪಾದಿಸಿಕೊಂಡಿರುವ ಜನತೆಯ ಪ್ರತಿನಿಧಿಗಳು, ಈಗ ಸಾರ್ವಜನಿಕ ಹಣವನ್ನು ಉಪಯೋಗಿಸಿ ಜನಸಮೂಹದ ಭವಿಷ್ಯವನ್ನು ರೂಪಿಸುವ ಅಧಿಕಾರವನ್ನು ಪಡೆದಿದ್ದಾರೆ. ರಾಜ್ಯದಲ್ಲಿ ಬಹುಕಾಲದಿಂದಲೂ ಬಾಕಿನಿಂತಿದ್ದ ಸ್ಥಳೀಯ ಸರ್ಕಾರಿ ಚುನಾವಣೆಗಳನ್ನು ಸಕಾಲದಲ್ಲಿ ನಡೆಸುವ ಪ್ರತಿಜ್ಞೆ ಮಾಡಿದ್ದ ಸರ್ಕಾರವು ಹದಿನೈದು ತಿಂಗಳುಗಳ ಅಲ್ಪಾವಧಿಯಲ್ಲೇ ಎಲ್ಲಾ ಪ್ರಯತ್ನಗಳನ್ನೂ ಮಾಡಿದೆ. ಅದರಂತೆ, 1979ರ ಮೇ ತಿಂಗಳಲ್ಲಿ ತ್ರಿಪುರಾದಲ್ಲೇ ಮೊದಲ ಬಾರಿಗೆ ರಹಸ್ಯ ಮತದಾನದ ಮೂಲಕ ಪಂಚಾಯತಿ ಚುನಾವಣೆಗಳು ನಡೆದು, ಅನೇಕ ರಾಜಕೀಯ ಪಕ್ಷಗಳು ಇದರಲ್ಲಿ ಭಾಗವಹಿಸಿದ್ದವು. ರಾಜ್ಯದ ಪಂಚಾಯತಿ ಚುನಾವಣೆಯ ಇತಿಹಾಸದಲ್ಲೇ ಹಿಂದೆಂದೂ ಇಲ್ಲದ ಹಾಗೆ ಜನರು ಮತದಾನ ಮಾಡಲು ಕುತೂಹಲ ತಾಳಿದರು. ಉನ್ನತಮಟ್ಟದ ರಾಜಕೀಯ ಒಗ್ಗೂಡಿಕೆಯನ್ನು ಉಳ್ಳ ಒಂದು ಹಂತವನ್ನು ಈ ಚುನಾವಣೆ ತಂದಿತ್ತಲ್ಲದೆ, ಮತದಾರರ ಸಾಮಾಜಿಕ-ಆರ್ಥಿಕ ಕಲ್ಪನೆಗಳೂ ಗಮನಾರ್ಹ ಮಟ್ಟವನ್ನು ಮುಟ್ಟಿದ್ದವು.

3. ರಾಜ್ಯದ ಪಂಚಾಯತ್‌ರಾಜ್ ವ್ಯವಸ್ಥೆಯ ಹಿಂದಿನ ಮತ್ತು ಇತರ ತೀವ್ರ ಸಮಸ್ಯೆಗಳನ್ನು ಸರ್ಕಾರವು ಗಂಭೀರವಾಗಿ ಪರಿಶೀಲಿಸಿದೆ. ಪಂಚಾಯತಿ ರಾಜ್ಯವನ್ನು ಜಾರಿಗೆ ತರುವುದಕ್ಕೆ ಹಿಂದೆ ಇದ್ದ ಉದ್ದೇಶಗಳೇನೇ ಇರಲಿ, ಈಗ ಅದನ್ನು ನಾಗರಿಕ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳನ್ನು ಕಾರ್ಯಗತ ಮಾಡುವ ಆಡಳಿತ ಜವಾಬ್ದಾರಿಯ ಒಂದು ಸಾಧನವೆಂದು ಸಂಕುಚಿತ ಅರ್ಥದಲ್ಲಿ ನೋಡಲಾಗುವುದಿಲ್ಲ. ಅಥವಾ ಸ್ಥಳೀಯ ಸರ್ಕಾರವನ್ನು ಗ್ರಾಮೀಣ ಪ್ರದೇಶಗಳಿಗೆ ವಿಸ್ತರಿಸುವುದು ಎಂದು ಕೂಡ ಪರಿಗಣಿಸಲಾಗುವುದಿಲ್ಲ ಎಂಬ ತೀರ್ಮಾನಕ್ಕೆ ಸರ್ಕಾರ ಬಂದಿದೆ. ಗ್ರಾಮೀಣ ಪ್ರದೇಶಗಳ ಪ್ರಜಾಸತ್ತಾತ್ಮಕ ಬೆಳವಣಿಗೆ ಮತ್ತು ಅದರ ಆಶಯಗಳ ಈಡೇರಿಕೆಗಳಲ್ಲಿ ಮುಖ್ಯಪಾತ್ರವನ್ನು ಪಂಚಾಯತ್‌ರಾಜ್ ಘಟಕಗಳು ವಹಿಸಬೇಕಾಗಿರುವುದರಿಂದ ಮತ್ತು ಆ ಮೂಲಕ ಗ್ರಾಮೀಣ ಜನಸಮೂಹದ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆಯನ್ನು ತರಬೇಕಾಗಿರುವುದರಿಂದ, ಪಂಚಾಯತ್‌ರಾಜ್ ಘಟಕಗಳು ಸಫಲವಾಗಬೇಕಾದರೆ ತಜ್ಞ ಮತ್ತು ಜವಾಬ್ದಾರಿಯುತ ಆಡಳಿತ ಅಗತ್ಯ ಎಂದು ಸರ್ಕಾರ ಮನಗಂಡಿದೆ.

4. ಪಂಚಾಯತ್‌ಗಳ ಚುನಾವಣಾಧಿಕಾರವನ್ನು ಹೊಂದಿರುವ, ರಾಜ್ಯದ ಮುಖ್ಯ ಚುನಾವಣಾಧಿಕಾರಿಯು ಸ್ಥಳೀಯ ಘಟಕಗಳ ಚುನಾವಣೆ ನಡೆಸುತ್ತಾರೆ. ಪಂಚಾಯತಿ ರಾಜ್ ಸಂಸ್ಥೆಗಳಿಗೆ ಸೇರಿದ ಅಧಿಕಾರಿಗಳು ಮತ್ತು ಇತರರಿಗೆ ತರಬೇತಿ ನೀಡಲು ಒಂದು ತರಬೇತಿ ಸಂಸ್ಥೆ ಇದೆ. ಪಂಚಾಯತಿ ಸಮಿತಿಗಳ ರಚನೆಗಾಗಿ 1978ರಲ್ಲಿ ತ್ರಿಪುರಾ ಬ್ಲಾಕ್ ಪಂಚಾಯತ್ ಸಮಿತಿಗಳ ಮಸೂದೆಯನ್ನು ಹೊರಡಿಸಲಾಗಿದೆ. ಗ್ರಾಮೀಣ ಅಭಿವೃದ್ಧಿ ಮತ್ತು ಗ್ರಾಮೀಣ ಸಮೂಹದ ಸಾಮಾಜಿಕ-ಆರ್ಥಿಕ ಕಲ್ಯಾಣಕ್ಕೆ ಸಂಬಂಧಿಸಿದ ಎಲ್ಲ ಕಾರ್ಯಕ್ರಮಗಳನ್ನು ಪಂಚಾಯತಿ ಸಮಿತಿ ನಡೆಸುತ್ತದೆ.

5. ರಾಜ್ಯದ ಜನತೆಯ ಮೂಲಭೂತ ಹಕ್ಕುಗಳನ್ನು ಸ್ಥಾಪಿಸಿ, ಕಾಪಾಡಲು ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳ ಮೂಲಕ ಜನತೆಯ ಅಭಿವೃದ್ಧಿಯನ್ನು ಅದರಲ್ಲೂ ಕೆಳಗೆ ತುಳಿಯಲ್ಪಟ್ಟ ದುರ್ಬಲ ವರ್ಗಗಳ ಅಭಿವೃದ್ಧಿ ನಡೆಸಲು ತ್ರಿಪುರಾ ಸರ್ಕಾರ ಯೋಚಿಸಿದೆ. ಗ್ರಾಮೀಣ ಜನತೆಯ ಅಭಿವೃದ್ಧಿಗೆ ಅತಿ ಪ್ರಾಮುಖ್ಯತೆಯನ್ನು ನೀಡಿ ಮತ್ತು ಗ್ರಾಮೀಣ-ನಗರ ಅಭಿವೃದ್ಧಿಯ ಹೊಂದಾಣಿಕೆ ಮಾಡಿ ಗ್ರಾಮೀಣ ಪ್ರದೇಶಗಳನ್ನು ಅಭಿವೃದ್ಧಿಪಡಿಸಿ ಸಾಮಾಜಿಕ-ಆರ್ಥಿಕ ಪರಿವರ್ತನೆಯನ್ನು ತರುವುದು ಈ ಅಭಿವೃದ್ಧಿ ಕಾರ್ಯಕ್ರಮಗಳ ಮುಖ್ಯೋದ್ದೇಶ. ಈ ಪ್ರಯತ್ನದಲ್ಲಿ, ರಾಜ್ಯ ಸರ್ಕಾರವು ಕೃಷಿ, ನೀರಾವರಿ, ಸಂಪರ್ಕಸಾಧನಗಳು, ಕುಡಿಯುವ ನೀರಿನ ಸರಬರಾಜು, ವಿದ್ಯುತ್, ಶಿಕ್ಷಣ, ಇತ್ಯಾದಿಗಳಿಗೆ ತುಂಬಾ ಪ್ರಾಮುಖ್ಯತೆಯನ್ನು ನೀಡಿದೆ. ಭೂಹೀನ, ಮನೆಯಿಲ್ಲದ ಬಾರ್ಗದಾರರು ಮತ್ತು ಜುಹ್ಮಿಯಾಗಳ ಪಟ್ಟಿತಯಾರಿಸಿ ಅವರಿಗೆ ಶಾಶ್ವತ ವಸತಿ ನೀಡಲು ಪಂಚಾಯತಿಗಳು ತತ್ಪರವಾಗಿವೆ.

6. ಪಂಚಾಯತಿರಾಜ್ ಸಂಸ್ಥೆಗಳ ಮೂಲಕ ಕೆಲಸಕ್ಕೆ ಆಹಾರ ನೀಡುವ ಯೋಜನೆಗಳನ್ನು ಜಾರಿಗೆ ತರಲು ಸರ್ಕಾರ ಉದ್ಯುಕ್ತವಾಗಿದೆ. ಪಂಚಾಯತಿಗಳ ಮೂಲಕ ವಿಕೇಂದ್ರೀಕೃತ "ಕೆಲಸಕ್ಕೆ ಆಹಾರ" ಕಾರ್ಯಕ್ರಮವನ್ನು ಕಾರ್ಯಗತಗೊಳಿಸಿರುವುದರಿಂದ ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗಾವಕಾಶಗಳು ತುಂಬಾ ವಿಸ್ತರಿಸಿವೆಯಲ್ಲದೆ ಅನೇಕ ಸಾಮೂಹಿಕ ಆಸ್ತಿಗಳನ್ನು ರಚಿಸಲಾಗಿದೆ. ಜನತೆ ಮತ್ತು ಸರ್ಕಾರ, ತಮ್ಮ ಮೇಲೆ ಇಟ್ಟಿದ್ದ ವಿಶ್ವಾಸವನ್ನು ಪಂಚಾಯತಿಗಳು ಉಳಿಸಿಕೊಂಡಿವೆ.

7. ತಮ್ಮ ಪ್ರದೇಶಗಳ ನ್ಯಾಯಬೆಲೆ ಅಂಗಡಿಗಳ ಮೇಲೆ ಎಚ್ಚರಿಕೆ ಮತ್ತು ಉಸ್ತುವಾರಿಯನ್ನು ಪಂಚಾಯತ್‌ಗಳು ವಹಿಸುತ್ತವೆ. ಪಂಚಾಯತಿಗಳಿಗೇ ನ್ಯಾಯಬೆಲೆ ಅಂಗಡಿಗಳ ಸಗಟುದಾರಿಕೆಯನ್ನು ನೀಡುವ ಪ್ರಾಮುಖ್ಯತೆ ಕೊಡಲಾಗುತ್ತದೆ. ದೂರ ಪ್ರದೇಶಗಳಲ್ಲಿ ಖಾಸಗಿ ವ್ಯಕ್ತಿಗಳು ಅಗತ್ಯ ವಸ್ತುಗಳ ವಿತರಣೆಯ ಸಗಟುದಾರಿಕೆಯನ್ನು ಒಪ್ಪಿಕೊಳ್ಳದಿದ್ದರೆ, ಪಂಚಾಯತಿಗಳೇ ಮಾರಾಟದ ಜವಾಬ್ದಾರಿ ವಹಿಸಿಕೊಳ್ಳುತ್ತವೆ.

8. ಕೃಷಿವಿಭಾಗ, ಕೃಷಿ ತಂತ್ರಗಳು, ಸಣ್ಣ ನೀರಾವರಿ, ಪಶುಸಂಗೋಪನೆ, ಹೈನುಗಾರಿಕೆ ಅಭಿವೃದ್ಧಿ, ಮೀನುಗಾರಿಕೆ, ತೋಟಗಾರಿಕೆ, ಸಾಮಾಜಿಕ ಅರಣ್ಯಗಾರಿಕೆ ಇತ್ಯಾದಿಗಳಿಗೆ ಅತಿ ಪ್ರಾಮುಖ್ಯತೆಯನ್ನು ಕೊಡುವುದರ ಮೂಲಕ ಆರೋಗ್ಯಕರ ಪ್ರಜಾಪ್ರಭುತ್ವವನ್ನು ಬೆಳೆಸಲು ಸರ್ಕಾರ ನಿರ್ಧರಿಸಿದೆ. ಪಂಚಾಯತಿರಾಜ್ ಸಂಸ್ಥೆಗಳ ಮೂಲಕ ಆರ್ಥಿಕ ಅಭಿವೃದ್ಧಿಯನ್ನು ಮಾಡುವ ಸರ್ಕಾರದ ಯೋಜನೆಗೆ ಈ ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳು ಬದ್ಧವಾಗಿವೆ. ಪಂಚಾಯತಿಗಳ ಮೂಲಕವೇ ವೃದ್ಧಾಪ್ಯವೇತನ ನೀಡಿಕೆಯನ್ನು ಮಾಡಲಾಗುತ್ತದೆ. ನೈಸರ್ಗಿಕ ವಿಕೋಪಗಳ ಸಂದರ್ಭದಲ್ಲಿ ಕಷ್ಟದಲ್ಲಿರುವ ಜನತೆಗೆ ಸಹಾಯಮಾಡಲು ಪಂಚಾಯತಿಗಳು ಮುಂದೆ ಬಂದಿವೆ.

9. ಸದ್ಯದಲ್ಲಿ, ಸರ್ಕಾರದಿಂದ ಬರುವ ಧನಸಹಾಯವೇ ಪಂಚಾಯತಿಗಳ ಮುಖ್ಯ ಆದಾಯವಾಗಿದೆ. ಮಾರುಕಟ್ಟೆಗಳು, ಪಶುಗಳ ನೀರಿನ ತೊಟ್ಟಿಗಳು, ಕಾಲುವೆಗಳು, ಮೀಸಲಿಲ್ಲದ ಅರಣ್ಯಗಳು, ಮೀನುಗಾರಿಕೆ ಕೆರೆಗಳು ಮುಂತಾದ ಸಾರ್ವಜನಿಕ ಆಸ್ತಿಯನ್ನು ಪಂಚಾಯತಿಗಳಿಗೆ ವರ್ಗಾಯಿಸಿ, ಅವುಗಳಿಂದ ಬರುವ ಆದಾಯದಿಂದ ಪಂಚಾಯತಿಗಳು ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸುವಂತೆ ಸರ್ಕಾರ ಇತ್ತೀಚೆಗೆ ಮಾಡಿದೆ. ಆದರೆ ಗ್ರಾಮೀಣ ಜನಸಮೂಹದ ಬೆಳೆಯುತ್ತಿರುವ ಬೇಡಿಕೆಗಳ ಈ ಪರಿಸ್ಥಿತಿಯಲ್ಲಿ ಇವು ಏನೇನೂ ಸಾಲದಾಗಿದೆ. ಕೇಂದ್ರ, ರಾಜ್ಯ ಮತ್ತು ಪಂಚಾಯತಿಗಳ ತೆರಿಗೆಗಳನ್ನು ಸ್ಪಷ್ಟವಾಗಿ ಬೇರ್ಪಡಿಸಿರುವ ಒಂದು ಸುಭದ್ರ ತೆರಿಗೆ ವ್ಯವಸ್ಥೆ ಈಗ ಅಗತ್ಯವಾಗಿದೆ. ಕೆಳಹಂತಗಳಲ್ಲಿ ಪ್ರಜಾಪ್ರಭುತ್ವವು ಆರೋಗ್ಯಕರವಾಗಿ ಬೆಳೆಯಬೇಕಾದರೆ ರಾಷ್ಟ್ರೀಯ ಆದಾಯದ ಸಮಾನ ವಿತರಣೆಯೂ ಅಗತ್ಯವಾಗಿದೆ. ಉದಾರ ನಿಯಮಗಳು ಮತ್ತು ಕರಾರುಗಳ ಮೇಲೆ ಈ ಸಂಸ್ಥೆಗಳಿಗೆ ಹಣಕಾಸು ಸಂಘಗಳು ಧನಸಹಾಯ ಮಾಡಿ ಈ ಕಾರ್ಯಕ್ರಮದಲ್ಲಿ ಸೇರಿಕೊಂಡಿವೆ.

10. ಬಲಿವಂತ್ರಮೆಹ್ತಾ ಸಮಿತಿ ಎಂದು ಹೆಸರಾದ ಸಮೂಹಯೋಜನೆಗಳ ಅಧ್ಯಯನಾ ತಂಡದ ವರದಿಯು, ಪ್ರಜಾಪ್ರಭುತ್ವವಾದಿ ಸಂಸ್ಥೆಗಳ ಸ್ಥಾಪನೆ ಮತ್ತು ಬೆಳವಣಿಗೆಗೆ ತುಂಬಾ ಉತ್ತೇಜನ ಕೊಟ್ಟಿದೆ. "ಪಂಚಾಯತ್‌ರಾಜ್ ಸಂಸ್ಥೆಗಳು ಪ್ಲೇಟೋನ ರಿಪಬ್ಲಿಕ್ ಅನ್ನೂ ಮೀರಿಸುವಂಥ ಮಾದರಿಗಳನ್ನು ನೀಡಬಲ್ಲವು" ಎಂದು ಕೇಂದ್ರದ ಸಮೂಹ ಅಭಿವೃದ್ಧಿ ಮತ್ತು ಸಹಕಾರ ಇಲಾಖೆಯ ಮಂತ್ರಿಗಳು ಘೋಷಿಸಿದ್ದರೆ. ಆದರೆ ಸಮಿತಿಯು ಸೂಚಿಸಿರುವ ತ್ರಿಪಕ್ಷೀಯ ಪಂಚಾಯತಿ ವ್ಯವಸ್ಥೆಯಿಂದ ಗ್ರಾಮೀಣ ಆರ್ಥಿಕ ಅಭಿವೃದ್ಧಿಯಲ್ಲಿ ನಿರೀಕ್ಷಿತ ಫಲ ದೊರಕಲಾರದು. ಪಂಚಾಯತ್ ರಾಜ್ ಸಂಸ್ಥೆಗಳ ಜೀವಂತಿಕೆ ಮತ್ತು ಸಮೂಹ ಅಭಿವೃದ್ಧಿಯ ಪ್ರಗತಿಗಳ ನಡುವೆ ಬಲಿವಂತ್ರಮೆಹ್ತಾ ಸಮಿತಿ ಸೂಚಿಸಿದ ಹೊಂದಾಣಿಕೆ ಇಲ್ಲವಾಗುತ್ತದೆ. ಈ ಎಲ್ಲವನ್ನೂ ಗಮನಿಸಿ, 1977ರ ಡಿಸೆಂಬರ್‌ನಲ್ಲಿ ಕೇಂದ್ರ ಸರ್ಕಾರವು ಪಂಚಾಯತ್‌ರಾಜ್ ಸಂಸ್ಥೆಗಳ ಒಂದು ಸಮಿತಿಯನ್ನು ಅಶೋಕ ಮೆಹ್ತಾರ ಅಧ್ಯಕ್ಷತೆಯಲ್ಲಿ ನೇಮಿಸಿತು. 132 ಶಿಫಾರಸುಗಳನ್ನು ಮಾಡಿ, 1978ರ ಆಗಸ್ಟ್‌ನಲ್ಲಿ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿತು. ಅದರ ಪ್ರಾಮುಖ್ಯತೆಯಿಂದಾಗಿ ವರದಿಯು ದೇಶದಾದ್ಯಂತ ತೀವ್ರ ಚರ್ಚೆ ಮತ್ತು ವಾದವಿವಾದಗಳನ್ನು ಪಡೆದುಕೊಳ್ಳುತ್ತದೆ.

11. ಪಂಚಾಯತ್‌ರಾಜ್ ಸಂಸ್ಥೆಗಳ ಕಾರ್ಯಗಳನ್ನು ಸಮಗ್ರವಾಗಿ ಪರಿಶೀಲಿಸಿ ಸಮಿತಿಯು ಅಮೂಲ್ಯ ಶಿಫಾರಸುಗಳನ್ನು ಮಾಡಿದೆ. ರಾಷ್ಟ್ರೀಯ ಮತ್ತು ರಾಜ್ಯ ಮಟ್ಟಗಳಲ್ಲಿ ಪ್ರಜಾಪ್ರಭುತ್ವ ಇರುವ ಹಾಗೆ, ಪಂಚಾಯತಿಗಳು ಧ್ಯೇಯ-ಸಾಧನಗಳೆರಡೂ ಆಗಿವೆ ಎಂಬ ಮೂಲಭೂತ ದೃಷ್ಟಿಕೋನ ಸಮಿತಿಗೆ ಇದೆ. ಗ್ರಾಮೀಣ ಭಾರತದ ಶ್ರೀಮಂತ ಜೀವನದ ತತ್ವ ಮತ್ತು ಆಚರಣೆಗೆ ಇದು ಸಹಾಯಮಾಡಬಹುದು. ಗ್ರಾಮೀಣ ಜೀವನದ ಎಲ್ಲ ಕ್ಷೇತ್ರಗಳಲ್ಲೂ ಪ್ರಜಾಪ್ರಭುತ್ವವಾದಿ ಬೆಳವಣಿಗೆಯನ್ನು ಪಂಚಾಯತಿಗಳು ತರಬೇಕು. ಇದಕ್ಕೆ ತಕ್ಕ ಹಾಗೆ ರಾಜ್ಯಸರ್ಕಾರವು ಜವಾಬ್ದಾರಿಗಳನ್ನು ನೀಡಿ, ಅದರ ನೀತಿಗಳನ್ನು ರಾಜ್ಯಮಟ್ಟದಲ್ಲಿ ರೂಪಿಸಬೇಕು. ಪಂಚಾಯತಿಗಳು ಈ ಹಿಂದೆ ವಿಫಲಗೊಂಡಿವೆಯೆಂದು ಹೇಳುವುದು ತಪ್ಪು ಎಂದು ಸಮಿತಿ ತೀರ್ಮಾನಿಸಿದೆ. ಹಾಗೆ ನೋಡಿದರೆ ಅದು ಅನೇಕ ಸಾಧನೆಗಳನ್ನು ಮಾಡಿದೆ ಮತ್ತು ಗ್ರಾಮೀಣ ಪ್ರದೇಶದಲ್ಲಿ ಹೊಸ ಅಭಿವೃದ್ಧಿ ನಾಯಕತ್ವವನ್ನು ಸೃಷ್ಟಿಸಿದೆ. ಸಮಿತಿಯು ಅನುಸರಿಸಿದ ಪರಿವೀಕ್ಷಣೆಯ ವಿಧಾನದ ಬಗ್ಗೆ ನಮ್ಮ ಭಿನ್ನಾಭಿಪ್ರಾಯವಿದ್ದರೂ, ಈ ದೃಷ್ಟಿಕೋನವನ್ನು ನಾವು ಸಂಪೂರ್ಣವಾಗಿ ಒಪ್ಪುತ್ತೇವೆ.

12. ದ್ವಿಪಕ್ಷೀಯವಾದ ಪಂಚಾಯತಿ ವ್ಯವಸ್ಥೆಯನ್ನು ಕಟ್ಟಬೇಕು ಎನ್ನುವುದು ಸಮಿತಿಯ ಅತಿ ಮುಖ್ಯವಾದ ಶಿಫಾರಸು. ರೆವೆನ್ಯೂ ಜಿಲ್ಲೆಯನ್ನು ಅದು ರಾಜ್ಯಮಟ್ಟಕ್ಕೆ ಕೆಳಗಿನ ಮೊದಲ ವಿಕೇಂದ್ರೀಕರಣ ಅಂಶವನ್ನಾಗಿ ಪರಿಗಣಿಸುತ್ತದೆ. ಇದರಿಂದ ಗ್ರಾಮೀಣ ಅಭಿವೃದ್ಧಿಗೆ ಬೇಕಾದ ಉನ್ನತಮಟ್ಟದ ತಾಂತ್ರಿಕ ತಜ್ಞತೆಯೂ ಸಿಗುತ್ತದೆ. ಒಟ್ಟಿನಲ್ಲಿ ಮಹಾರಾಷ್ಟ್ರ ಮತ್ತು ಗುಜರಾತ್‌ಗಳಲ್ಲಿರುವಂತೆ ಜಿಲ್ಲಾ ಪರಿಷತ್‌ಗಳೇ ಕಾರ್ಯಕಾರಿ ಘಟಕವಾಗಬೇಕು. ಅನೇಕ ಹಳ್ಳಿಗಳನ್ನು ಒಳಗೊಂಡು ರಚಿಸಲ್ಪಟ್ಟ ಒಂದು ಮಂಡಲ ಪಂಚಾಯತಿಯಾಗಿ ಜಿಲ್ಲಾ ಪರಿಷತ್ ಕೆಲಸ ಮಾಡಬೇಕು. ಸಮಿತಿ ಹೀಗೆ ಹೇಳುತ್ತದೆ:

"ಜಿಲ್ಲಾಮಟ್ಟದ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿ ಹೀಗೆ ದ್ವಿಪಕ್ಷೀಯ ವ್ಯವಸ್ಥೆಗೆ ನಮ್ಮ ಬೆಂಬಲವಿದ್ದರೂ, ಇನ್ನೆರಡು ವ್ಯವಸ್ಥೆಗಳು ಈಗಾಗಲೇ ಅಸ್ತಿತ್ವದಲ್ಲಿರುವುದರಿಂದ, ಶಿಫಾರಸು ಮಾಡಿದ ವ್ಯಾವಸ್ಥಿಕ ಮಾದರಿ ರೂಪುಗೊಂಡು ಕೆಲಸ ಮಾಡಲು ಸಾಕಷ್ಟು ಸಮಯ ತೆಗೆದುಕೊಳ್ಳುವುದೆಂಬುದರ ಅರಿವು ನಮಗಿದೆ. ಈಗಿರುವ ಬ್ಲಾಕ್‌ಮಟ್ಟದ ಪಂಚಾಯತಿ ಸಮಿತಿಗಳನ್ನು ಜಿಲ್ಲಾ ಪರಿಷತ್ತಿನ ಶಾಸನೋಕ್ತವಲ್ಲದ ಕಾರ್ಯಕಾರಿ ಸಮಿತಿಗಳನ್ನಾಗಿ ಪರಿವರ್ತಿಸಲಾಗುವುದು. ಮಂಡಲ ಪಂಚಾಯತಿಗಳು ಕಾರ್ಯಾರಂಭ ಮಾಡಿದಾಗ ಅವುಗಳ ಕೆಲಸವನ್ನೆಲ್ಲಾ ಮಂಡಲ ಪಂಚಾಯತಿಗಳೇ ವಹಿಸಿಕೊಳ್ಳುವುವು. ತಮ್ಮ ಅಗತ್ಯಗಳು ಮತ್ತು ಅಭಿವೃದ್ಧಿಯ ಮಟ್ಟವನ್ನು ಗಮನದಲ್ಲಿರಿಸಿಕೊಂಡು ಬದಲಾಗುತ್ತಿರುವ ರಚನೆಯಾದ ಬ್ಲಾಕ್‌ಗಳನ್ನು ರಾಜ್ಯ ಇರಿಸಿಕೊಳ್ಳಬಹುದು. ಪೌರ ಕಾರ್ಯಗಳು ಮತ್ತು ಸಂಬಂಧಿಸಿದ ಕಲ್ಯಾಣ ಕೆಲಸಗಳನ್ನು ನೋಡಿಕೊಳ್ಳುವ ಗ್ರಾಮ ಸಮಿತಿಗಳ ಮೂಲಕ ಗ್ರಾಮಮಟ್ಟದಲ್ಲಿ ಜನತೆಯು ಮಂಡಲ ಪಂಚಾಯತಿಗಳ ಜೊತೆ ಕೆಲಸಮಾಡಬಹುದು. ಮಂಡಲ ಪಂಚಾಯತಿಗಳನ್ನು ರಚಿಸುವವರೆಗೂ ಗ್ರಾಮ ಪಂಚಾಯತಿಗಳ ಒಂದು ಸಂಘವನ್ನು ಕಟ್ಟಬಹುದು".

13. ತ್ರಿಪುರಾ ರಾಜ್ಯದಲ್ಲಿ ಇತ್ತೀಚೆಗೆ ಬ್ಲಾಕ್ ಪಂಚಾಯತಿ ಸಮಿತಿಗಳ ಮಸೂದೆಯನ್ನು ಜಾರಿಗೆ ತರಲಾಗಿದೆ. ರಹಸ್ಯ ಮತದಾನದ ಆಧಾರದ ಮೇಲೆ ಗ್ರಾಮ ಪಂಚಾಯತಿಗಳಿಗೆ ಚುನಾವಣೆಗಳನ್ನು ಈಗ ಮುಗಿಸಲಾಗಿದೆ. ಅಶೋಕಮೆಹ್ತಾ ಸಮಿತಿಯು ಶಿಫಾರಸು ಮಾಡಿದ ದ್ವಿಪಕ್ಷೀಯ ವ್ಯವಸ್ಥೆಗಿಂತ ಭಿನ್ನವಾದ "ದ್ವಿಪಕ್ಷೀಯ ಗ್ರಾಮಪಂಚಾಯತಿ ಮತ್ತು ಬ್ಲಾಕ್ ಪಂಚಾಯತಿ" ಸಮಿತಿಗಳ ವ್ಯವಸ್ಥೆ ಇರುತ್ತದೆ. ಗ್ರಾಮ ಮಟ್ಟದಲ್ಲಿ ಒಂದು ಚುನಾಯಿತ ಕಾರ್ಯಾಂಗ ಇರಬೇಕೆಂದು ಸಮಿತಿ ಭಾವಿಸುವುದಿಲ್ಲ. ಗ್ರಾಮಸಮಿತಿ ಇದ್ದರೆ ಸಾಕೆಂದು ಅದು ಹೇಳುತ್ತದೆ. ಮೆಹ್ತಾ ಪುನರ್ರಚನಾ ಯೋಜನೆಯಲ್ಲಿ ಈ ಅಭಾವದಿಂದ ಗ್ರಾಮವು ತೀರ ಕಂಡೂಕಾಣದ ಸ್ಥಾನಕ್ಕೆ ಬಂದು ನಿಲ್ಲುತ್ತದೆ. ರಾಜಕೀಯ ಸಂಸ್ಥೆಗಳು ಶೂನ್ಯದಲ್ಲಿ ನಿಂತು ಕೆಲಸಮಾಡುವುದಿಲ್ಲ. ಗ್ರಾಮದ ಅಸ್ತಿತ್ವವನ್ನು ಕಾಣದಂತೆ ಭಾವಿಸುವುದರಿಂದ ಅಶೋಕಮೆಹ್ತಾ ಸಮಿತಿ ಈ ವಿಚಾರವನ್ನು ಹೊಂದಿರುವ ಅಪಾಯವಿರುವಂತೆ ಕಾಣುತ್ತದೆ. ಗ್ರಾಮದ ಸಂಪೂರ್ಣ ಅಸ್ತಿತ್ವವನ್ನು ಗಮನಿಸಿ ಅದರ ಮೇಲೆ ವಿಕೇಂದ್ರೀಕೃತ ರಚನೆಯನ್ನು ಕಟ್ಟುವುದು ಹೆಚ್ಚು ಒಳ್ಳೆಯದು. ಅಶೋಕ್ ಮೆಹ್ತಾ ಸಮಿತಿಯ ಶಿಫಾರಸುಗಳನ್ನು ಜಾರಿಗೆ ತರುವುದಕ್ಕೆ ಮುಂಚೆ, ತ್ರಿಪುರಾ ರಾಜ್ಯಕ್ಕೆ ಸಂಬಂಧಿಸಿದ ಹಾಗೆಷ್ಟಾದರೂ ಪಂಚಾಯತಿ ಮತ್ತು ಬ್ಲಾಕ್ ಪಂಚಾಯತಿ ಸಮಿತಿಗಳಿಗೆ ಸಾಕಷ್ಟು ಪ್ರಯೋಗ ನಡೆಸುವುದು ಒಳ್ಳೆಯದು. ಅಲ್ಲದೆ ಭಾರತದ ಇತರ ಭಾಗಗಳ ಹಾಗೆ, ಅಭಿವೃದ್ಧಿಯಲ್ಲಿ ಜಿಲ್ಲೆಯು ಇನ್ನೂ ಪ್ರಮುಖ ಪಾತ್ರವನ್ನು ವಹಿಸಿಲ್ಲವಾದ್ದರಿಂದ ಇರುವ ಹದಿನೇಳು ಬ್ಲಾಕ್ ಪಂಚಾಯತಿ ಸಮಿತಿಗಳ ಕೆಲಸವನ್ನು ರಾಜ್ಯ ಮಟ್ಟದಿಂದಲೇ ನಿರ್ದೇಶಿಸಬಹುದು.

14. ಸಮಿತಿಯು ಪಟ್ಟಿಮಾಡಿರುವ ವಿಕೇಂದ್ರೀಕೃತ ರಚನೆಯು ಮಾಡಬೇಕಾಗಿರುವ ಕಾರ್ಯಗಳು ತೃಪ್ತಿಕರವಾಗಿವೆ. ಅದನ್ನು ಒಪ್ಪಿಕೊಂಡರೆ, ನೈಜ ವಿಕೇಂದ್ರೀಕರಣ ಮಾಡಿದಂತಾಗುತ್ತದೆ. ಆದರೆ ಇದನ್ನೆಲ್ಲ ಹಾಗೇ ಉಳಿಸಿಕೊಳ್ಳಲಾಗುವುದಿಲ್ಲ. ಇದನ್ನು ಆಗಾಗ್ಗೆ ಪರಿಶೀಲಿಸಿ, ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಕೆಲವು ಕಾರ್ಯಗಳು ಇರಬೇಕೆನ್ನುವುದನ್ನೂ ಗಮನಿಸಬೇಕಾಗುತ್ತದೆ. ಒಂದು ಜಿಲ್ಲೆಗೆ ಸೇರಿದ ಎಲ್ಲ ಅಭಿವೃದ್ಧಿ ಕಾರ್ಯಗಳನ್ನೂ ಜಿಲ್ಲಾಪರಿಷತ್ತಿಗೆ ಒಪ್ಪಿಸಬೇಕೆಂದು ಸಮಿತಿ ಶಿಫಾರಸು ಮಾಡುತ್ತದೆ. ಜಿಲ್ಲಾ ಪರಿಷತ್ತುಗಳು ವಹಿಸಿದ ಯೋಜನೆಗಳು ಕಾರ್ಯಗತವಾಗುವುದನ್ನು ಮಂಡಲ ಪರಿಷತ್ತುಗಳು ನೋಡಿಕೊಳ್ಳುತ್ತವೆ. ನಿಯಂತ್ರಣ ಕಾರ್ಯಗಳನ್ನು ಜಿಲ್ಲಾ ಕಲೆಕ್ಟರ್ ನೋಡಿಕೊಳ್ಳುತ್ತಾರೆ. ಇದನ್ನೂ ಮುಂದೆ ಪರಿಶೀಲಿಸಬೇಕಾಗುತ್ತದೆ. ಆರ್ಥಿಕ ಯೋಜನೆಯ ವಿಧಾನಕ್ಕೆ ಜಿಲ್ಲೆಯನ್ನೇ ಮಟ್ಟವನ್ನಾಗಿಟ್ಟುಕೊಳ್ಳಬೇಕೆಂದು ಸಮಿತಿ ಹೇಳುತ್ತದೆ. ಈ ಉದ್ದೇಶಕ್ಕೆ ತಜ್ಞರಾದವರ ಒಂದು ಗುಂಪನ್ನು ಜಿಲ್ಲಾ ಮಟ್ಟದಲ್ಲಿ ಇರಿಸಿ, ರಾಜ್ಯ ಸರ್ಕಾರವು ನಿರಂತರ ಸಹಾಯವನ್ನು ಒದಗಿಸಬೇಕಾಗುತ್ತದೆ. ಇಡೀ ಜಿಲ್ಲಾ ಪರಿಷತ್ ಅನ್ನು ಉಳ್ಳ ಒಂದು ಸಮಿತಿಯ ಮುಂದೆ ಜಿಲ್ಲಾ ಯೋಜನೆಯನ್ನು ಇಡಲಾಗುತ್ತದೆ. ತ್ರಿಪುರಾ ರಾಜ್ಯದಲ್ಲಿ ಕೆಲಸಕ್ಕೆ ಆಹಾರ ಮುಂತಾದ ಯೋಜನೆಗಳ ಕಾರ್ಯಗತಫಲಗಳು ತೋರಿಸಿರುವ ಹಾಗೆ, ಸೂಕ್ತ ವಿಕೇಂದ್ರೀಕೃತ ಗ್ರಾಮೀಣ ಯೋಜನೆಗಳ ಜಾರಿಯನ್ನು ಮತ್ತು ಪರಿಣಾಮಕಾರಿ ಸಹಕಾರವನ್ನು ಬ್ಲಾಕ್ ಮಟ್ಟದಲ್ಲಿ ಸಾಧಿಸಲು ಸಾಧ್ಯವಿದೆ. ರಾಜ್ಯದ ವಿಶೇಷ ಭೌಗೋಳಿಕ ಪರಿಸ್ಥಿತಿಯಿಂದ, ಜಿಲ್ಲೆಯನ್ನು ಯೋಜನಾ ಘಟಕವಾಗಿ ಗಣಿಸುವುದು ಸರಿಯಲ್ಲ. ರಾಜ್ಯಮಟ್ಟಕ್ಕಿಂತ ಕೆಳಗೆ ಬ್ಲಾಕ್‌ಮಟ್ಟದ ಪಂಚಾಯತಿ ಸಮಿತಿಗಳನ್ನೇ ಯೋಜನಾ ಘಟಕವಾಗಿ ಗಣಿಸುವುದು ಸೂಕ್ತ.

15. ನಮ್ಮ ಅಭಿಪ್ರಾಯದಲ್ಲಿ, ಇ. ಎಂ. ಎಸ್. ನಂಬೂದಿರಿಪಾದ್ ಅವರು ಸೂಚಿಸಿರುವ ಹಾಗೆ, ಅಭಿವೃದ್ಧಿ ಮತ್ತು ನಿಯಂತ್ರಣ ಕಾರ್ಯಗಳು ಎಂದು ಯಾವ ವಿಭಜನೆಯನ್ನೂ ಮಾಡದೆ ಸಮಗ್ರ ಅಧಿಕಾರಗಳು ಮತ್ತು ಜವಾಬ್ದಾರಿಗಳನ್ನು ಪಂಚಾಯತಿಗಳಿಗೇ ಬಿಟ್ಟುಕೊಡಬೇಕು. ದುರ್ಬಲ ವರ್ಗ, ನಿಮ್ನವರ್ಗ ಮತ್ತು ಜಾತಿಗಳಿಗೆ ಸಂಬಂಧಿಸಿದ ಹಾಗೆ ಸಮಿತಿಯು ಎಲ್ಲ ಉಪಯುಕ್ತ ಸಲಹೆಗಳನ್ನು ನೀಡಿದೆ. ಶೇಕಡಾ ಇಪ್ಪತ್ತಕ್ಕಿಂತ ಹೆಚ್ಚು ಜನಸಂಖ್ಯೆಯ ನಿಮ್ನವರ್ಗ ಮತ್ತು ಬುಡಕಟ್ಟು ಇದ್ದರೆ ಅಥವಾ ಜನಸಂಖ್ಯೆಯ ಬಹುಸಂಖ್ಯಾತರು ಬುಡಕಟ್ಟು ವರ್ಗದವರಾಗಿದ್ದರೆ ಚುನಾವಣಾಸ್ಥಾನಗಳ ಮೀಸಲಾತಿಯನ್ನು ವಿಸ್ತರಿಸಬೇಕೆಂದು ಶಿಫಾರಸು ಮಾಡಲಾಗಿದೆ. ಎಲ್ಲ ಉನ್ನತ ಮಟ್ಟಗಳ ಪ್ರಜಾಪ್ರಭುತ್ವವಾದಿ ಸಂಸ್ಥೆಗಳಲ್ಲೂ ನಿಮ್ನ ವರ್ಗ ಮತ್ತು ಗಿರಿಜನರಿಗೆ ವಿಶಾಲ ಮತ್ತು ಹೆಚ್ಚು ಅವಕಾಶಗಳನ್ನು ಈ ಸರ್ಕಾರ ಕಲ್ಪಿಸುತ್ತದೆ. ಸಮಿತಿಯ ಶಿಫಾರಸುಗಳು ಮತ್ತು ರಾಜ್ಯದ ಚಾರಿತ್ರಿಕ ಅನುಭವದ ಬೆಳಕಿನಲ್ಲಿ ಇದನ್ನು ಜಾರಿಮಾಡುವ ಸೂಕ್ತವಿಧಾನವನ್ನು ಎಚ್ಚರಿಕೆಯಿಂದ ರೂಪಿಸಬೇಕಾಗುತ್ತದೆ.

16. ಗ್ರಾಮಗಳ ದುರ್ಬಲ ಸಾಮಾಜಿಕ ಮತ್ತು ಆರ್ಥಿಕ ಗುಂಪುಗಳ ಹಿತಾಸಕ್ತಿಗಳನ್ನು ಸುಧಾರಿಸಲು ಮತ್ತು ಕಾಪಾಡಲು ಕೆಲವು ಮೇಲ್ವಿಚಾರಕ ಮಂಡಲಿಗಳನ್ನು ರಚಿಸಬೇಕೆಂದು ಸಮಿತಿ ಶಿಫಾರಸು ಮಾಡಿದೆ. ಈ ಗುಂಪುಗಳು ತಮಗೆ ನೀಡಲಾದ ನಿಧಿಗಳನ್ನು ಸರಿಯಾಗಿ ವೆಚ್ಚ ಮಾಡಿದೆಯೇ ಎಂಬುದರ ಬಗ್ಗೆ, ಒಂದು ಜಿಲ್ಲಾ ಮಟ್ಟದ ಏಜೆನ್ಸಿಯಿಂದ ಮತ್ತು ಶಾಸಕರ ಸಮಿತಿಯಿಂದ ಸಾಮಾಜಿಕ ಪರಿಶೋಧನೆ ನಡೆಸುವುದೂ ಸೂಕ್ತವಾಗಿದೆ. ಇವುಗಳ ಕೊರತೆ ಇದ್ದರೆ, ಚೂಟಿಯಾದ ಕಾರ್ಯಕರ್ತರು ಸೇವೆ ಮಾಡುವ ಹೆಸರಿನಲ್ಲಿ ಲಾಭಗಳನ್ನು ದುರುಪಯೋಗ ಮಾಡಿಕೊಳ್ಳುವ ಸಾಧ್ಯತೆಯಿದೆ. ಈ ಗುಂಪುಗಳ ಸರಿಯಾದ ಕಲ್ಯಾಣದಲ್ಲಿ ನಿಜವಾದ ಆಸಕ್ತಿಯನ್ನು ಪಂಚಾಯತಿರಾಜ್ ಸಂಸ್ಥೆಗಳು ತೋರಿಸುತ್ತಿವೆ ಎಂಬುದನ್ನು ದೃಢಪಡಿಸಲು ಒಂದು 'ಸಾಮಾಜಿಕ ನ್ಯಾಯ ಸಮಿತಿ'ಯನ್ನು ಕೂಡ ರಚಿಸಬೇಕೆಂದು ಸಲಹೆ ಮಾಡಲಾಗಿದೆ. ಸಮಿತಿಯು ಸೂಚಿಸಿದ ಈ ಘಟಕಗಳಲ್ಲಿ ಎಚ್ಚರಿಕೆಯಿಂದ ಸ್ಥಳೀಯ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಸದಸ್ಯರನ್ನು ಆಯ್ಕೆಮಾಡಿದರೆ, ಅವು ತುಂಬಾ ಉಪಯುಕ್ತವಾಗಬಲ್ಲವು. ನಿಮ್ನವರ್ಗ ಮತ್ತು ಗಿರಿಜನರಿಗೆ ಸೂಕ್ತ ಪ್ರಾತಿನಿಧ್ಯವುಳ್ಳ ಸಮಿತಿಯೊಂದನ್ನು ರಾಜ್ಯ ಶಾಸಕಾಂಗವು ರಚಿಸುತ್ತದೆ. ಇದು ದುರ್ಬಲ ವರ್ಗಗಳ ಅಗತ್ಯಗಳಿಗೆ ತಕ್ಕಂತೆ ಕಾರ್ಯ ನಡೆಸುತ್ತದೆ.

17. ಪಂಚಾಯತಿರಾಜ್ ಸಂಸ್ಥೆಗಳು ಆರ್ಥಿಕ ಅಥವಾ ಸಾಮಾಜಿಕ ಅವಕಾಶಗಳನ್ನು ಹೆಚ್ಚು ಉಳ್ಳ ಸಮಾಜದ ವಿಭಾಗದಿಂದಲೇ ಇದುವರೆಗೆ ನಡೆಸಲ್ಪಟ್ಟು ದುರ್ಬಲ ವರ್ಗದವರಿಗೆ ಯಾವ ಲಾಭಗಳನ್ನೂ ಕೊಡದೆ ಕೆಲಸ ಮಾಡಿವೆ ಎಂದು ಸಮಿತಿಯು ಶೋಧಿಸಿರುವುದು ಈಗ ನಮ್ಮ ಕಣ್ಣು ತೆರೆಸಬೇಕು. ಈ ಸಂಸ್ಥೆಗಳಲ್ಲಿ ಜಾತಿವಾದ, ಭ್ರಷ್ಟಾಚಾರ,ಅಸಮರ್ಥತೆ, ರಾಜಕೀಯ ಮಧ್ಯ ಪ್ರವೇಶ ಮತ್ತು ಅಧಿಕಾರ ಕೇಂದ್ರೀಕರಣಗಳು ತುಂಬಿವೆ ಎಂದೂ ಸಮಿತಿ ಗಮನಿಸಿದೆ. "ಆಧುನೀಕರಣದ ಅಂಗವಾಗಿ ಪ್ರಜಾಪ್ರಭುತ್ವೀಕರಣ ನಡೆದಾಗ ಸಾಂಪ್ರದಾಯಿಕ ನಾಯಕತ್ವ ಕ್ರಮೇಣ ಇಲ್ಲವಾಗುತ್ತದೆ. ಹಳೇ ವಿಧಾನವನ್ನು ಕಡಿಮೆ ಮಾಡಲು ಯಾವ ತಕ್ಷಣದ ಪರಿಹಾರವೂ ಇಲ್ಲ. ಕಾಲಕಾಲಕ್ಕೆ ಮತದಾರರಿಗೆ ಅವರ ವಿಚಾರವನ್ನು ಒಪ್ಪಿಸುವುದರಿಂದ ಮಾತ್ರ ಈ ಪಟ್ಟಭದ್ರ ಗುಂಪುಗಳ ಪ್ರಭಾವವನ್ನು ಕಡಿಮೆ ಮಾಡಬಹುದು" ಎಂಬ ಸಮಿತಿಯ ಅಭಿಪ್ರಾಯವನ್ನು ಈ ಸರ್ಕಾರ ಒಪ್ಪುತ್ತದೆ.

18. ಪಂಚಾಯತಿರಾಜ್ ಚಟುವಟಿಕೆಗಳಲ್ಲಿ ರಾಜಕೀಯ ಪಕ್ಷಗಳ 'ಬಹಿರಂಗ ಭಾಗವಹಿಸುವಿಕೆ'ಯನ್ನು ಬೆಂಬಲಿಸುವ ಶಿಫಾರಸು, ಮೆಹ್ತಾ ವರದಿಯ ಗಮನಾರ್ಹ ಅಂಶವಾಗಿದೆ. ಇದುವರೆಗೆ ಅನುಸರಿಸಲಾಗಿರುವ ನೀತಿಯಿಂದ ಇದು ಭಿನ್ನವಾಗಿದೆ. ರಾಜಕೀಯ ಪಕ್ಷಗಳ ಬಹಿರಂಗ ಭಾಗವಹಿಸುವಿಕೆಯ ಆಧಾರದ ಮೇಲೆ ಪ.ಬಂಗಾಳ, ತ್ರಿಪುರಾ,ಜಮ್ಮು ಮತ್ತು ಕಾಶ್ಮೀರಗಳು ಪಂಚಾಯತಿ ಚುನಾವಣೆಗಳನ್ನು ನಡೆಸಿವೆ. ಪಕ್ಷರಹಿತ ಚುನಾವಣೆ ಎಂದು ಕರೆದುಕೊಳ್ಳುವ ರಾಜ್ಯಗಳಲ್ಲೂ ರಾಜಕೀಯ ಪಕ್ಷಗಳು ಕಂಠಮಟ್ಟ ಭಾಗವಹಿಸಿವೆ. ಪಕ್ಷರಹಿತ ಚುನಾವಣೆಗಳಲ್ಲೂ ಕೂಡ ಪಕ್ಷದ ಹೆಸರು ಪಟ್ಟಿ ಇಲ್ಲದೆಯೇ ಅದೇ ಸ್ಪರ್ಧಾತ್ಮಕ ಸ್ವರೂಪ ಇರುತ್ತದೆ. ಆದ್ದರಿಂದ ಪಂಚಾಯತಿ ಚುನಾವಣೆಗಳಲ್ಲಿ ರಾಜಕೀಯ ಪಕ್ಷಗಳು ಭಾಗವಹಿಸಬೇಕು ಎನ್ನುವ ಶಿಫಾರಸು ವಿವೇಕಯುತವೂ ಅಪೇಕ್ಷಣೀಯವೂ ಆಗಿದೆ. ಸ್ಥಳೀಯ ಮತ್ತು ಸದ್ಯದ ವಿಚಾರಗಳಲ್ಲಿ ಜನತೆಯನ್ನು ತೊಡಗಿಸುವುದಕ್ಕೆ ರಾಜಕೀಯ ಪಕ್ಷಗಳೇ ಮುಖ್ಯದಾರಿಗಳಾಗಿವೆ ಮತ್ತು ಅವು ಚುನಾವಣೆಯಲ್ಲಿ ಭಾಗವಹಿಸಿದಾಗ ಪರಿಗಣನೆಗೂ ಅರ್ಹವಾಗುತ್ತವೆ. ಪಂಚಾಯತಿ ಚುನಾವಣೆಗಳಿಗೆ ರಾಜಕೀಯ ಸ್ವರೂಪ ತಂದಾಗ, ಸಮೂಹದ ಸಾಮಾಜಿಕ ಮನಸ್ಸಿಗೆ ಹೊಸ ಸಾಂಸ್ಥಿಕ ಅಭಿವ್ಯಕ್ತಿಗಳನ್ನು ಕೊಟ್ಟಂತಾಗುತ್ತದೆ. ವಿಶಾಲ ರಾಜಕೀಯ ವಿಚಾರಗಳಿಗೆ ಜನತೆಯನ್ನು ನೇರ ಸಂಬಂಧಕ್ಕೆ ತಂದಂತಾಗುತ್ತದೆ. ಚರಿತ್ರೆಯಲ್ಲೆ ಮೊದಲ ಬಾರಿಗೆ,'ಪಂಚಾಯತಿ ಆಡಳಿತಗಳ' ಮೂಲಕ ಜನತೆಯು ಪ್ರಜಾಪ್ರಭುತ್ವದ ವಾಸ್ತವಗಳನ್ನು ಅರಿತುಕೊಳ್ಳುತ್ತಿದ್ದಾರೆ. ಈ ಶಿಫಾರಸ್ಸಿಗೆ ರಾಜ್ಯ ಸರ್ಕಾರದ ಸಂಪೂರ್ಣ ಒಪ್ಪಿಗೆ ಇದೆ.

19. ಹಣಕಾಸು ಸಂಪನ್ಮೂಲ, ತೆರಿಗೆ ನೀತಿಗೆ ಸಂಬಂಧಿಸಿದ ಹಾಗೆ, ರಾಜ್ಯಸರ್ಕಾರ ನೀಡುವ ಬಜೆಟ್ ಹಣದ ಜೊತೆಗೆ ಪಂಚಾಯತಿರಾಜ್ ಸಂಸ್ಥೆಗಳು ತಮ್ಮದೇ ಆದ ಸಂಪನ್ಮೂಲಗಳನ್ನೂ ಬಳಸಿಕೊಳ್ಳಬೇಕೆಂದು ಸಮಿತಿ ಸಲಹೆಮಾಡುತ್ತದೆ, ಅವುಗಳಿಗೆ ಕಡ್ಡಾಯ ತೆರಿಗೆ ಹಾಕುವ ಅಧಿಕಾರ ಇರಬೇಕು, ಅಲ್ಲದೆ ಐಚ್ಛಿಕ ತೆರಿಗೆಗಳು ಇರಬೇಕು. ವಿದ್ಯುತ್, ಒಳಚರಂಡಿ, ನೀರು ಸರಬರಾಜು ಮುಂತಾದ ಸೇವೆಗಳಿಗೆ ಪಂಚಾಯತಿಗಳು ಶುಲ್ಕ ವಿಧಿಸಬೇಕು. ಕೇವಲ ಬಾಹ್ಯ ಸಂಪನ್ಮೂಲಗಳ ಆಧಾರದ ಮೇಲೆಯೇ ಯಾವ ಪ್ರಜಾಪ್ರಭುತ್ವವಾದಿ ಸಂಸ್ಥೆಯೂ ಕಾರ್ಯ ನಡೆಸಲು ಸಾಧ್ಯವಿಲ್ಲವೆಂದು ಸಮಿತಿ ಅಭಿಪ್ರಾಯ ಪಡುತ್ತದೆ. ಆದರೆ ಒಂದು ರಾಜ್ಯ ಹಣಕಾಸು ಸಮಿತಿಯ ರಚನೆಯನ್ನು ಈ ಸಮಿತಿ ಬೆಂಬಲಿಸಿಲ್ಲ. ಕೇಂದ್ರ, ರಾಜ್ಯ ಮತ್ತು ಪಂಚಾಯತಿಗಳ ತೆರಿಗೆ ಮೂಲಗಳನ್ನು ಸ್ಪಷ್ಟವಾಗಿ ಬೇರ್ಪಡಿಸಲು ಒಂದು ದೃಢ ತೆರಿಗೆ ನೀತಿ ಅಗತ್ಯವಾಗುತ್ತದೆ. ಕೇಂದ್ರ, ರಾಜ್ಯ ಮತ್ತು ಪಂಚಾಯತಿ ತೆರಿಗೆಗಳ ಗುರಿಯಾಗುವ ಹಳ್ಳಿಯ ಬಡವರ ಹೊರೆಯನ್ನು ಕಡಿಮೆ ಮಾಡಲು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪಂಚಾಯತಿಗಳ ಜೊತೆ ಸೇರಿ, ಇಡೀ ಆಡಳಿತದ ಹಣಕಾಸು ಸಂಪನ್ಮೂಲಗಳ ಪರಿಶೀಲನೆ ನಡೆಸಿ, ಉಪಯೋಗಿಸಿಕೊಳ್ಳಬಹುದಾದ ಎಲ್ಲ ಸಂಪನ್ಮೂಲಗಳ ವಿತರಣೆಗೆ ದಾರಿಗಳನ್ನು ಕಂಡುಕೊಳ್ಳಬೇಕೆಂದು ನಮ್ಮ ಅಭಿಪ್ರಾಯವಾಗಿದೆ.

20. ಗ್ರಾಮೀಣ ಬೆಳವಣಿಗೆಯನ್ನು ಅಶೋಕಮೆಹ್ತಾ ಸಮಿತಿಯು ನಗರ-ಗ್ರಾಮೀಣ ಅಖಂಡತೆಯ ಭಾಗವನ್ನಾಗಿ ಗಣಿಸಿ, ನಗರ ಕೇಂದ್ರಗಳಿಗೆ ಹಳ್ಳಿಯವರು ವಲಸೆ ಬರುವುದನ್ನು ತಡೆಯಲು ಹಳ್ಳಿಯಲ್ಲೇ ನಗರ ಸೌಲಭ್ಯಗಳಾದ ರಸ್ತೆ,ಕುಡಿಯುವ ನೀರು, ವೈದ್ಯಕೀಯ ಸೇವೆ, ಉದ್ಯೋಗ ಮತ್ತು ಶಿಕ್ಷಣಗಳನ್ನು ಒದಗಿಸಬೇಕೆಂದು ವಾದಿಸುತ್ತದೆ. ಇದು ಒಂದು ಹಿತಕರ ಸಲಹೆ. ಏಕೆಂದರೆ ಈ ಸಂಪರ್ಕಗಳು ಗ್ರಾಮೀಣ-ನಗರ ಸಮೂಹಗಳ ಸ್ಥಾಪನೆಗೆ ದಾರಿ ಮಾಡುತ್ತವೆ. ಈ ಸಮೂಹಗಳು ಗ್ರಾಮಾಧಾರದ ಮೇಲಿದ್ದು, ನಗರಗಳ ಆಧುನಿಕ ಸೇವೆ ಸೌಲಭ್ಯಗಳನ್ನು ಹೊಂದಿರುತ್ತವೆ. ಇದರಿಂದ ಹೊಸ ಉದ್ಯೋಗ ಅವಕಾಶಕ್ಕೆ ದಾರಿಯಾಗುತ್ತದೆ. ಅಲ್ಲದೆ ಹೊಸ ಕೃಷಿ ಪ್ರಗತಿಯಿಂದ ವಂಚಿತರಾದವರಿಗೆ ಹೊಸ ಅವಕಾಶ ಸಿಗುತ್ತದೆ.

21. ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಸ್ಥಾನ ಮತ್ತು ಅಂಗೀಕಾರಕ್ಕೆ ಸಂವಿಧಾನ ತಿದ್ದುಪಡಿ ಮಾಡಬೇಕೆಂಬ ಸಮಿತಿಯ ಶಿಫಾರಸು ಹೊಸದೇನಲ್ಲ. ಪಂಚಾಯತಿಗಳಿಗೆ ಸಂವಿಧಾನಾತ್ಮಕ ಸ್ಥಾನ ಮತ್ತು ಹೆಚ್ಚು ಅಧಿಕಾರ ಕೊಡಲು ಬಯಸುವ ಸಂವಿಧಾನ ತಿದ್ದುಪಡಿ ಮಸೂದೆಯ ಅಂಶಗಳು ಮತ್ತು ಕರಡನ್ನು, 1973ರ ಮಾರ್ಚಿಯಲ್ಲೇ ಪ್ರಧಾನ ಮಂತ್ರಿಗಳಿಗೆ ಅರ್ಪಿಸಲಾಗಿದೆ ಆದರೆ ಇದುವರೆವಿಗೂ ಯಾವ ಸುದ್ದಿಯೂ ಅಲ್ಲಿಂದ ಬರದಿರುವುದೂ ಶೋಚನೀಯವಾಗಿದೆ.

22. ಕೊನೆಯದಾಗಿ, ಆಡಳಿತ, ಮಾನವ ಮೂಲಗಳು, ಅಭಿವೃದ್ಧಿ ಮತ್ತು ಇತರ ಸಂಸ್ಥೆಗಳಜೊತೆ ಸಂಬಂಧಗಳು, ಈ ಬಗ್ಗೆಯ ಸಮಿತಿಯ ಸಲಹೆಗಳನ್ನು ನಾವು ಒಪ್ಪುತ್ತೇವೆ. ●

ಪೋಲೀಸ್ ದಂಗೆ: ಪ. ಬಂಗಾಳದಲ್ಲಿ ಇಲ್ಲ

—ಸುಬ್ರತ ಪಾಲ್

ಕೆಲವು ತಿಂಗಳುಗಳಿಂದ ಇಡೀ ದೇಶದಲ್ಲಿ ಪೋಲೀಸ್‌ದಂಗೆ ಇದ್ದರೆ, ಪಶ್ಚಿಮ ಬಂಗಾಳದಲ್ಲಿ ಅದರ ಸುದ್ದಿಯೇ ಇಲ್ಲ. ಇದಕ್ಕೆ ಕಾರಣ ಹುಡುಕಲು ಹೆಚ್ಚು ದೂರ ಹೋಗಬೇಕಿಲ್ಲ. ವಾಮರಂಗ ಸರ್ಕಾರದ ಧೋರಣೆ, ಅದರ ಘೋಷಿತ ನೀತಿ, ಅಲ್ಲದೆ ಅದು ಕೈಗೊಂಡಿರುವ ದೃಢ ಕ್ರಮಗಳು ಇವೆಲ್ಲವೂ ಇದರ ಹಿನ್ನೆಲೆಯಲ್ಲಿ ಇವೆ.

ವಿವಿಧ ರಾಜ್ಯಗಳಲ್ಲಿ ಪೋಲೀಸರು ಮುಷ್ಕರ ಹೂಡಲು ಒಂದು ಕಾರಣ ಎಂದರೆ ಸಂಘ ಕಟ್ಟಿಕೊಳ್ಳುವ ಹಕ್ಕು. ಪ. ಬಂಗಾಳದಲ್ಲಿ ಇಂಥ ಸಂಘಗಳನ್ನು ರಾಜ್ಯ ಸರ್ಕಾರ ಎಂದೋ ಅಂಗೀಕರಿಸಿದೆ.

1969ರಷ್ಟು ಹಿಂದೆಯೇ, ಎರಡನೇ ಸಂಯುಕ್ತರಂಗ ಸರ್ಕಾರವು ಪ. ಬಂಗಾಳ ನಾನ್‌ಗೆಜೆಟೆಡ್ ಪೋಲೀಸ್ ನೌಕರರ ಸಮಿತಿಗೆ ಅಂಗೀಕಾರ ಕೊಟ್ಟಿತ್ತು ಎಂಬುದನ್ನು ಸ್ಮರಿಸಬಹುದು. ನಂತರ ಸಿದ್ಧಾರ್ಥರಾಯ್ ನೇತೃತ್ವದ ಕಾಂಗ್ರೆಸ್ ಮಂತ್ರಿಮಂಡಲ ಅಂಗೀಕಾರವನ್ನು ವಾಪಸ್ಸು ತೆಗೆದುಕೊಂಡಿತ್ತು.

1977ರಲ್ಲಿ ವಾಮರಂಗ ಸರ್ಕಾರವು ಅಧಿಕಾರಕ್ಕೆ ಬಂದಕೂಡಲೇ ಇತರ ಜನವರ್ಗಗಳ ಪ್ರಜಾಪ್ರಭುತ್ವವಾದಿ ಮತ್ತು ಟ್ರೇಡ್ ಯೂನಿಯನ್ ಹಕ್ಕುಗಳ ಪುನರ್‌ಸ್ಥಾಪನೆಯ ಜೊತೆಗೆ, ನಾನ್‌ಗೆಜೆಟೆಡ್ ಪೋಲೀಸರ ಸಂಘವೂ

[6ನೇ ಪುಟ ನೋಡಿ]

ಪೋಲೀಸ್ ದಂಗೆ: ಪ. ಬಂಗಾಳದಲ್ಲಿ ಇಲ್ಲ

[5ನೇ ಪುಟದಿಂದ]

ಮನ್ನಣೆಯನ್ನು ಮರಳಿ ಪಡೆಯಿತು. ಜೊತೆಗೆ, ಹಿಂದಿನ ಸರ್ಕಾರವು ಕಾನೂನು ಬಾಹಿರವಾಗಿ ವಜಾ ಮಾಡಿದ್ದ ಪೋಲೀಸರನ್ನೂ ಸದ್ಯದ ಮಂತ್ರಿ ಮಂಡಲ ಪುನರ್‌ನೇಮಕ ಮಾಡಿತು.

ಆರಂಭದಿಂದಲೂ ವಾಮರಂಗ ಸರ್ಕಾರವು ಪೋಲೀಸರ ನ್ಯಾಯಬದ್ಧ ಬೇಡಿಕೆಗಳ ಬಗ್ಗೆ ಸಹಾನುಭೂತಿಯಿಟ್ಟುಕೊಂಡಿದೆ. ಒಟ್ಟಾರೆ ರಾಜ್ಯ ಸರ್ಕಾರದ ನೌಕರರಿಗೆ ನೀಡುವ ಎಲ್ಲ ಸವಲತ್ತುಗಳನ್ನೂ ಅವರಿಗೆ ಕೊಡಲಾಗಿದೆ. ಅವರ ಇನ್ನೂ ಕೆಲವು ಬೇಡಿಕೆಗಳನ್ನು ಈಡೇರಿಸಲು ಕ್ರಮಕೈಗೊಳ್ಳಲಾಗಿದೆ. ಪೋಲೀಸರ ವೇತನ ಶ್ರೇಣಿಗಳ ಬೇಡಿಕೆಗಳ ಬಗ್ಗೆ ಒಂದು ವೇತನ ಆಯೋಗ ಪರಿಶೀಲನೆ ನಡೆಸುತ್ತಿದೆ.

ಈ ಮಧ್ಯೆ ಅವರಿಗೆ "ಪರಿಹಾರ ರಜೆ" ಯನ್ನು ನೀಡಲು ರಾಜ್ಯಸರ್ಕಾರ ಆಶಿಸುತ್ತದೆ. ಇದಕ್ಕೆ ವೇತನ ಆಯೋಗದಿಂದ ಅಪ್ಪಣೆ ಕೇಳಲಾಗಿದೆ. ಹಿರಿಯ ಅಧಿಕಾರಿಗಳು ಸಾಧಾರಣ ಪೋಲೀಸರನ್ನು ಜವಾನರಂತೆ ನಡೆಸಿಕೊಳ್ಳುವ ಹೀನಪದ್ಧತಿಯನ್ನು ತಕ್ಷಣವೇ ನಿರ್ಮೂಲಗೊಳಿಸಲು ವಾಮರಂಗ ಸರ್ಕಾರ ದೃಢವಾಗಿ ನಿರ್ಧರಿಸಿದೆ.

ಪೋಲೀಸರ ಕೊರತೆಗಳನ್ನು ವಿಚಾರಿಸಲು ರಾಜ್ಯಮಟ್ಟದ ಮತ್ತು ಜಿಲ್ಲಾ ಮಟ್ಟದ ಸಲಹಾಸಮಿತಿಗಳನ್ನು ರಚಿಸಲಾಗುವುದೆಂದು ಜೂನ್ 29 ರಂದು ಮುಖ್ಯಮಂತ್ರಿ ಜ್ಯೋತಿಬಸು ಹೇಳಿದರು. ರಾಜ್ಯಮಟ್ಟದ ಸಮಿತಿಗೆ ಮುಖ್ಯಮಂತ್ರಿಗಳೇ ಅಧ್ಯಕ್ಷರಾಗಿರುತ್ತಾರೆ. ಇವರ ಜೊತೆಗೆ ಪೋಲೀಸ್ ಅಧಿಕಾರಿಗಳ ಪ್ರತಿನಿಧಿಗಳು ಮತ್ತು ಪೋಲೀಸ್ ಸಂಘಗಳು ಸೂಚಿಸಿದ ವ್ಯಕ್ತಿಗಳು ಇರುತ್ತಾರೆ.

ಜೂನ್ ತಿಂಗಳಲ್ಲಿ ಮುಖ್ಯಮಂತ್ರಿ ಬಸು ಅವರು ಎರಡು ಪೋಲೀಸ್ ರ‍್ಯಾಲಿಗಳನ್ನು ಉದ್ದೇಶಿಸಿ ಭಾಷಣ ಮಾಡಿದರು. ಒಂದು, ಜೂನ್ 9 ರಂದು ಆಲಿಪುರ್ ಪೋಲೀಸ್ ಲೈನ್ಸ್‌ನಲ್ಲಿ ನಡೆದರೆ ಇನ್ನೊಂದು 11 ರಂದು ಹೌರಾದ ಶಿವಪುರ್ ಪೋಲೀಸ್ ಲೈನ್ಸ್‌ನಲ್ಲಿ ನಡೆಯಿತು. ಪಶ್ಚಿಮ ಬಂಗಾಳದ ಪೋಲೀಸರಲ್ಲಿ ಅಶಾಂತಿ ಇಲ್ಲದಿರುವುದರ ಬಗ್ಗೆ ಸಮಾಧಾನ ವ್ಯಕ್ತಪಡಿಸಿದ ಮುಖ್ಯಮಂತ್ರಿಗಳು, ರಾಜ್ಯದ ಜನತೆ ವಿವಿಧ ಸಂದರ್ಭಗಳಲ್ಲಿ ಉದಾಹರಣೆಯಾಗಿ ನಿಂತಿರುವಂತೆ ಇದರಲ್ಲೂ ಇದ್ದಾರೆ ಎಂದರು.

ಬಹುತೇಕ ಪೋಲೀಸರು ಸಾಧಾರಣ ಕುಟುಂಬಗಳಿಂದ ಬಂದಿರುತ್ತಾರೆ ಎಂದು ಅವರು ಹೇಳಿದರು, ರಾಜ್ಯ ಸರ್ಕಾರಕ್ಕೆ ಅವರ ಕೊರತೆಗಳ ಅರಿವು ಇದೆ. ಅವರ ಬೇಡಿಕೆಗಳ ಬಗ್ಗೆ ಅವರ ಜೊತೆ ಮಾತನಾಡುವ ಆಸೆ ಸರ್ಕಾರಕ್ಕಿದೆ. ಆದ್ದರಿಂದಲೇ ಸಂಘ ಕಟ್ಟುವ ಪೋಲೀಸರ ಹಕ್ಕನ್ನು ಅದು ಅಂಗೀಕರಿಸಿದೆ.

ಆದರೆ ಪೋಲೀಸರ ಮಕ್ಕಳನ್ನೂ ಪೋಲೀಸ್ ಪಡೆಗೆ ನೇಮಕ ಮಾಡಿಕೊಳ್ಳಬೇಕೆಂಬ ಅವರ ಬೇಡಿಕೆಯನ್ನು ಒಪ್ಪಲು ಮುಖ್ಯಮಂತ್ರಿ ಬಸು ನಿರಾಕರಿಸಿದರು. ಉದ್ಯೋಗ ವಿನಿಮಯ ಕೇಂದ್ರಗಳಿಂದ ನೇಮಕಾತಿ ಮಾಡಿಕೊಳ್ಳುವುದು ವಾಮರಂಗ ಸರ್ಕಾರದ ನೀತಿಯಾಗಿದೆ. ಈ ನಿಯಮಕ್ಕೆ ಯಾವ ಅಪವಾದವೂ ಇರುವುದಿಲ್ಲ ಎಂದು ಅವರು ಹೇಳಿದರು.

ಹಿಂದಿನ ಅವಧಿಯ ಪೋಲೀಸ್ ಪಡೆಯ ಚಟುವಟಿಕೆಗಳ ಬಗ್ಗೆ ಮಾತನಾಡುತ್ತಾ, ಕಾಂಗ್ರೆಸ್ ಸರ್ಕಾರವು ಪ್ರಜಾಪ್ರಭುತ್ವವನ್ನು ತುಳಿಯಲು ಇದನ್ನು ಬಳಸಿಕೊಳ್ಳುತ್ತಿತ್ತು ಎಂದು ಹೇಳಿದರು. ಅನೇಕ ಸಂದರ್ಭಗಳಲ್ಲಿ ಪೋಲೀಸರ ಎದುರಿಗೇ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರನ್ನು ಕೊಲೆಮಾಡಲಾಗಿದೆ. ಹಾಗೆ ನೋಡಿದರೆ, ಸ್ವಾತಂತ್ರ್ಯ ಬಂದಾಗಲಿಂದಲೂ ಕಾಂಗ್ರೆಸ್ ಆಡಳಿತಗಾರರು ಪೋಲೀಸ್ ಪಡೆಯನ್ನು ಹಿಂಸೆಯ ಸಾಧನವನ್ನಾಗಿ ಬಳಸಿಕೊಳ್ಳುತ್ತಿದ್ದಾರೆ. ಇದರ ಪರಿಣಾಮವಾಗಿ ನಿರೀಕ್ಷಿಸಿದಂತೆಯೇ ಪೋಲೀಸರು ಜನತೆಯಿಂದ ದೂರವಾಗಿದ್ದಾರೆ.

ಪೋಲೀಸರನ್ನು ಜನತೆಯ ಒಂದು ಭಾಗವಾಗಿ ಕಂಡು, ಅವರ ಕುಂದು ಕೊರತೆಗಳ ಬಗ್ಗೆ ವಾಮರಂಗ ಸರ್ಕಾರ ಪರಿಶೀಲಿಸಿರುವಂತೆಯೇ. ಪೋಲೀಸರೂ ತಮ್ಮ ಧೋರಣೆಗಳು ಮತ್ತು ವರ್ತನೆಗಳನ್ನು ಸರಿಪಡಿಸಿಕೊಳ್ಳಬೇಕೆಂದು ಸರ್ಕಾರ ಆಶಿಸುತ್ತದೆ. ಪೋಲೀಸರು ಜನತೆಯ ಪ್ರಜಾಪ್ರಭುತ್ವವಾದಿ ಹಕ್ಕುಗಳನ್ನು ರಕ್ಷಿಸಬೇಕು ಮತ್ತು ಜನತೆಯ ವಿಶ್ವಾಸವನ್ನು ಗಳಿಸುವ ರೀತಿಯಲ್ಲಿ ಕೆಲಸಮಾಡಬೇಕು ಎಂದು ಪ್ರಸ್ತುತ ಸರ್ಕಾರ ಬಯಸುತ್ತದೆ. ಅವರು ಒಂದು ಕಡೆ ಸಮಾಜ ವಿರೋಧಿ ಚಟುವಟಿಕೆಗಳನ್ನು ಹತ್ತಿಕ್ಕಿದರೆ ಇನ್ನೊಂದು ಕಡೆ ಜನತೆಯ ಜೊತೆ ಸ್ನೇಹ ಸಂಬಂಧ ಬೆಳೆಸಿಕೊಳ್ಳಬೇಕು ಎಂದು ಮುಖ್ಯಮಂತ್ರಿಗಳು ಇದನ್ನು ಸ್ಪಷ್ಟಪಡಿಸಿದರು. ಸಾಮಾನ್ಯ ಜನತೆಯ ಹಿತಾಸಕ್ತಿಗಳನ್ನು ಕಾಪಾಡಲು ರೂಪಿಸಲಾಗಿರುವ 36 ಅಂಶಗಳ ಕಾರ್ಯಕ್ರಮದ ಅನ್ವಯದಲ್ಲಿ ಸಹಾಯ ಮಾಡಲು ಮುಂದೆ ಬರಬೇಕೆಂದು ಅವರು ಪೋಲೀಸರಿಗೆ ಕರೆಯಿತ್ತರು. ಕಳೆದ ವರ್ಷದ ಪ್ರವಾಹಗಳಲ್ಲಿ ಪೋಲೀಸರು ನಿರ್ವಹಿಸಿದ ಪಾತ್ರವನ್ನು ಅವರು ಪ್ರಶಂಸಿಸಿದರು.

ಪೋಲೀಸರು ಶಿಸ್ತಿನಿಂದ ವರ್ತಿಸಬೇಕೆಂದು ಮುಖ್ಯಮಂತ್ರಿ ಜ್ಯೋತಿಬಸು ಹೇಳಿದರು. ಈಗ ಪೋಲೀಸ್ ಪಡೆಯಲ್ಲಿರುವ ನಾಲ್ಕು ಸಂಘಗಳ ನಡುವೆ ಯಾವ ಕಲಹಗಳೂ ಇರಬಾರದೆಂದು ಅವರು ಹೇಳಿದರು.

ಮುಖ್ಯಮಂತ್ರಿಗಳ ಮತ್ತು ವಾಮರಂಗ ಸರ್ಕಾರದ ಧೋರಣೆಯನ್ನು ಸಾಧಾರಣ ಪೋಲೀಸರು ಸ್ವಾಗತಿಸಿದ್ದಾರೆ. ರಾಜ್ಯದಲ್ಲಿ ವಾಮರಂಗ ಸರ್ಕಾರವು ಅಧಿಕಾರಕ್ಕೆ ಬಂದ ಮೇಲೆ ಪೋಲೀಸರು ಸಂಘ ಕಟ್ಟಿಕೊಳ್ಳುವ ಹಕ್ಕನ್ನು ಪಡೆದಿರುವುದರಿಂದ ಪಶ್ಚಿಮ ಬಂಗಾಳದಲ್ಲಿ ಪೋಲೀಸ್ ದಂಗೆಯ ಸಾಧ್ಯತೆಯೇ ಇಲ್ಲವೆಂದು ಮೇ27ರಷ್ಟು ಹಿಂದೆಯೇ ಕಲ್ಕತ್ತ ಪೋಲೀಸ್ ಸಂಘದ ಕಾರ್ಯದರ್ಶಿ ಹೇಳಿಕೆ ಕೊಟ್ಟಿದ್ದರು. ಸರ್ಕಾರವು ಈಗಾಗಲೇ ಅವರ ಕೆಲವು ಬೇಡಿಕೆಗಳನ್ನು ಈಡೇರಿಸಿದೆ. ಇನ್ನೂ ಕೆಲವನ್ನು ಸಹಾನುಭೂತಿಯಿಂದ ಪರಿಶೀಲಿಸುತ್ತಿದೆ.

ರಾಜ್ಯದ ಮಿಕ್ಕ ಮೂರು ಪೋಲೀಸ್ ಸಂಘಗಳ ಅಭಿಪ್ರಾಯವೂ ಇದೇಆಗಿದೆ. ಜುಲೈ 1ರಂದು ನಾಲ್ಕೂ ಸಂಘಗಳು ಜಂಟಿಯಾಗಿ ತಮ್ಮ ಹೇಳಿಕೆಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಿವೆ. ರಾಜ್ಯದಲ್ಲಿ ಯಾವ ತರಹದ ಪೋಲೀಸ್ ಆಂದೋಲನವನ್ನು ಬೆಳೆಸದಿರಲು ಅವು ನಿರ್ಧರಿಸಿವೆ.

ಆದ್ದರಿಂದ ರಾಜ್ಯದ ಪೋಲೀಸರು ಯಾವ ದಂಗೆಯನ್ನೂ ಮಾಡಬೇಕಾಗಲಿಲ್ಲ. ಪೋಲೀಸ್ ಪಡೆಯ ಒಳಗೆ ಮತ್ತು ಹೊರಗೆ ಪ್ರಚೋದನೆಗಳು ಇರಲಿಲ್ಲವೆಂದೇನೂ ಅಲ್ಲ, ಆದರೆ ಅಂಥಹ ಪ್ರಚೋದಕರ ಯೋಜನೆಗಳು ವಿಫಲವಾದವು. ನಾನ್ ಗೆಜೆಟೆಡ್ ಪೋಲೀಸ್ ಕರ್ಮಚಾರಿ ಸಮಿತಿಯು ಜುಲೈ 6ರಂದು ನೀಡಿದ ಮನವಿಯಲ್ಲಿ ರಾಜ್ಯ ಪೋಲೀಸ್ ಪಡೆಯು ಯಾವ ಪ್ರಚೋದನೆಗೂ ಬಲಿಯಾಗಬಾರದೆಂದು ಕೇಳಿಕೊಂಡಿದೆ.

ಪೋಲೀಸರ ಹಕ್ಕುಗಳು ಮತ್ತು ಬೇಡಿಕೆಗಳ ಬಗ್ಗೆ 2ನೇ ಸಂಯುಕ್ತರಂಗ ಸರ್ಕಾರ ಮತ್ತು ಈಗಿನ ವಾಮರಂಗ ಸರ್ಕಾರಗಳ ಪಾತ್ರವನ್ನು ಸಮಿತಿ ಗೌರವದಿಂದ ನೆನೆದಿದೆ, ಸದ್ಯದ ಸರ್ಕಾರವು ಅವರ ಪ್ರಜಾಪ್ರಭುತ್ವವಾದಿ ಹಕ್ಕುಗಳನ್ನು ವಿಸ್ತರಿಸಿದೆ. ಒಂದು ವಾರ್ತಾಪತ್ರವನ್ನು ಪ್ರಕಟಿಸಲು ಅನುಮತಿ ನೀಡಿದೆ. ಅಲ್ಲದೆ ವರ್ಷಗಳಿಂದ ಪೋಲೀಸರಿಗೂ ಜನತೆಗೂ ಬೆಳೆದು ಬಂದಿರುವ ಕಹಿ ಸಂಬಂಧಗಳನ್ನು ಕೊನೆಗಾಣಿಸಲು ವಿಚಾರಗೋಷ್ಠಿಗಳು ಚರ್ಚೆಗಳನ್ನು ನಡೆಸಲು ಸಹ ಅನುಮತಿ ನೀಡಿದೆ.

ಪ್ರಜಾಪ್ರಭುತ್ವವಾದಿ ಚಳುವಳಿಗಳ ಮೇಲೆ ಪೋಲೀಸ್ ಪಡೆಯನ್ನು ಪ್ರಯೋಗಿಸಬಾರದೆಂಬ ವಾಮರಂಗ ಸರ್ಕಾರದ ನೀತಿಯನ್ನು ಸಾಧಾರಣ ಪೋಲೀಸರೂ ಬೆಂಬಲಿಸಿದಂತೆ ತಿಳಿದುಬಂದಿದೆ. ಪ್ರಜಾಪ್ರಭುತ್ವವಾದಿ ಚಳುವಳಿಗಳು ಮತ್ತು ತಮ್ಮ ನ್ಯಾಯಬದ್ಧ ಬೇಡಿಕೆಗಳ ಬಗ್ಗೆ ಕಾರ್ಮಿಕರು ಮತ್ತು ರೈತರು ನಡೆಸುವ ಚಳುವಳಿಗಳ ಜೊತೆ ತಮ್ಮ ಹಿತಾಸಕ್ತಿಗಳೂ ಸೇರಿವೆ ಎಂದು ಅವರು ಭಾವಿಸುತ್ತಾರೆ.

○

ಚಂದಾ ವಿವರ

ಬಿಡಿಪ್ರತಿ	40 ಪೈಸೆ
6 ತಿಂಗಳಿಗೆ	10 ರೂ.
ಒಂದು ವರ್ಷಕ್ಕೆ	20 ರೂ.

ಹಳಿಯಾಳದಲ್ಲಿ ಮತ್ತೆ ರೈತರ ಬಂಧನ

ಉ.ಕ. ಜಿಲ್ಲೆಯ ಹಳಿಯಾಳದಲ್ಲಿ ಭೂ ಸ್ವಾಧೀನ ಚಳುವಳಿ ಮತ್ತು ರೈತರ ಮೇಲೆ ನಡೆದ ಪೋಲೀಸ್ ದೌರ್ಜನ್ಯದ ಹಿನ್ನೆಲೆಯಲ್ಲಿ ಪ್ರಾಂತ ರೈತಸಂಘದ ಕಾರ್ಯಕಾರಿ ಸಮಿತಿಯು ಹಳಿಯಾಳದಲ್ಲಿ ಜೂನ್ 29 ಮತ್ತು 30 ರಂದು ಸಭೆ ಸೇರಿತ್ತು. ಶಾಂತಿಯುತವಾಗಿ ಪ್ರದರ್ಶನ ನಡೆಸಿದ್ದ ರೈತರ ಮೇಲೆ ಗೋಲಿಬಾರ್ ನಡೆಸಿ ರೈತನೊಬ್ಬನ ಜೀವವನ್ನು ಬಲಿತೆಗೆದುಕೊಂಡದ್ದನ್ನು ಸಮಿತಿಯು ತೀವ್ರವಾಗಿ ಖಂಡಿಸಿತು. ಹೋರಾಟವನ್ನು ಇನ್ನೂ ತೀವ್ರಗೊಳಿಸಲು ಮತ್ತು ವಿಶಾಲಗೊಳಿಸಲು ನಿರ್ಣಯಿಸಲಾಯಿತು.

ಇಷ್ಟೆಲ್ಲಾ ಆದಮೇಲೂ ಪೋಲೀಸರ ದಬ್ಬಾಳಿಕೆಯು ಮುಂದುವರಿದಿದೆಎಂದು ವರದಿಯಾಗಿದೆ. ಜುಲೈ 1ರಂದು ರೈತ ಮುಖಂಡ ನೀಲಕಂಠ ಬೊಬಾಟಿ ಮತ್ತು ಮಂಗಳವಾಡ ಗ್ರಾಮದ ಒಬ್ಬ ರೈತನನ್ನು ಪೋಲೀಸರು ಬಂಧಿಸಿದ್ದರು. ಇದರ ಬಗ್ಗೆ ವಿಚಾರಿಸಲು ಹೋದಾಗ ದರ್ಪದಿಂದ ಮಾತನಾಡಿ, ಇನ್ನೂ ಹಲವರನ್ನು ಬಂಧಿಸುವ ಬೆದರಿಕೆಯನ್ನು ಪೋಲೀಸರು ಹಾಕಿರುವರು. ಈ ಕೃತ್ಯವನ್ನು ಹಳಿಯಾಳದ ರೈತ ಕೂಲಿಗಾರರ ಸಂಘವು ತೀವ್ರವಾಗಿ ಖಂಡಿಸಿದೆ.

ಇನ್ನೂ ಈ ಅಕೃತ್ಯಗಳನ್ನು ನಿಲ್ಲಿಸದಿದ್ದಲ್ಲಿ ಪ್ರಾಂತ ರೈತಸಂಘದ ನೇತೃತ್ವದಲ್ಲಿ ಉಗ್ರ ಚಳುವಳಿಯನ್ನು ನಡೆಸಬೇಕಾಗುವುದೆಂದು ಸರಕಾರವನ್ನು ಎಚ್ಚರಿಸಲಾಗಿದೆ. ●

ಎಸ್. ಎಫ್. ಐ. ರಾಜ್ಯ ಸೆಕ್ರೆಟಾರಿಯಟ್ ತೀರ್ಮಾನಗಳು

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ಕರ್ನಾಟಕ ರಾಜ್ಯ ಸಮಿತಿಯ ಸೆಕ್ರಟಾರಿಯೇಟ್ ದಿನಾಂಕ 14.7.79 ರಂದು ಬೆಂಗಳೂರಿನಲ್ಲಿ ಸಭೆ ಸೇರಿ ಕೆಳಕಂಡ ನಿರ್ಣಯಗಳನ್ನು ಅಂಗೀಕರಿಸಿತು.

1. ಶ್ರದ್ಧಾಂಜಲಿ ಅರ್ಪಣೆ :

79 ರ ಏಪ್ರಿಲ್ 19 ರಂದು ಆಂಧ್ರ ಪ್ರದೇಶದವಾರಂಗಲ್‌ನ ಎಸ್.ಎಫ್.ಐ ಮುಖಂಡ ಕಾಂ. ಲಕ್ಷ್ಮಿನಾರಾಯಣ್‌ರವರನ್ನು ನಕ್ಸಲೈಟ್ ಗೂಂಡಾಗಳು ಕೊಲೆಗೈದುದನ್ನು ಖಂಡಿಸಿ ನಮ್ಮನ್ನಗಲಿರುವ ಸಂಗಾತಿಗೆ ಕರ್ನಾಟಕ ವಿದ್ಯಾರ್ಥಿಗಳ ಪರವಾಗಿ ಶ್ರದ್ಧಾಂಜಲಿ ಅರ್ಪಿಸುವ ನಿರ್ಣಯವನ್ನು ಅಂಗೀಕರಿಸಿತು.

2. ರಿಸರ್ವ್ ಬ್ಯಾಂಕ್ ನೌಕರರ ಮುಷ್ಕರ ನಿಷೇಧಿಸುವ ಕ್ರಮಕ್ಕೆ ಪ್ರತಿಭಟನೆ :

ರಿಸರ್ವ್ ಬ್ಯಾಂಕ್ ನೌಕರರ ಮುಷ್ಕರವನ್ನು ನಿಷೇಧಿಸಿ ಮಾಜಿ ಪ್ರಧಾನ ಮಂತ್ರಿ ಶ್ರೀ ಮುರಾರ್ಜಿ ದೇಸಾಯಿಯವರು ಹೊರಡಿಸಿರುವ ಸುಗ್ರೀವಾಜ್ಞೆಯನ್ನು ಸಭೆಯು ಖಂಡಿಸಿ ಈ ಆಜ್ಞೆಯ ಶೀಘ್ರ ವಾಪಸಾತಿಗೆ ಒತ್ತಾಯಪಡಿಸಲಾಯಿತು.

3. ಸಂಸ್ಕೃತ ಭಾಷೆಯನ್ನು ಐಚ್ಛಿಕ ವಿಷಯವನ್ನಾಗಿ ಮಾಡುವ ಸರ್ಕಾರದ ನಿಲುವಿಗೆ ಬೆಂಬಲ :

ಜೂನ್ 23 ರಂದು ವಿದ್ಯಾಮಂತ್ರಿಗಳು ಪ್ರೌಢಶಾಲೆಗಳಲ್ಲಿ ಸಂಸ್ಕೃತ ಭಾಷೆಯನ್ನು ಪ್ರಥಮ ಭಾಷೆಯ ಪಟ್ಟಿಯಿಂದ ತೆಗೆದುಹಾಕಿ ಐಚ್ಛಿಕ ವಿಷಯವನ್ನಾಗಿ ಮಾಡುವುದಾಗಿ ಪ್ರಕಟಿಸಿದ್ದು ಈ ಕ್ರಮವನ್ನು ಫೆಡರೇಷನ್ ಸ್ವಾಗತಿಸಿದೆ.

ಕೇಂದ್ರ ಸಮಿತಿ ಸಭೆ :

ಜುಲೈ 18, 19, 20 ರಂದು ದೆಹಲಿಯಲ್ಲಿ ಜರುಗಿದ ಎಸ್. ಎಫ್. ಐ. ಕೇಂದ್ರ ಸಮಿತಿಯ ಸಭೆಗೆ ಕರ್ನಾಟಕದ ಪ್ರತಿನಿಧಿಯಾಗಿ ಅಧ್ಯಕ್ಷರಾದ ಕಾಂ. ಇಕ್ಬಾಲ್ ಹುಸೇನ್ ರವರು ಹಾಗೂ 21 ಮತ್ತು 22 ರಂದು ನಡೆದ ರಾಷ್ಟ್ರಮಟ್ಟದ ವಿದ್ಯಾರ್ಥಿ ಮತ್ತು ಯುವಜನರ ಸಮಾವೇಶದಲ್ಲಿ ಕಾಂ. ಇಕ್ಬಾಲ್ ಹುಸೇನ್ ಮತ್ತು ಕಾಂ. ಶ್ರೀರಾಮರೆಡ್ಡಿ ಯವರು (ಡೆಮಾಕ್ರಟಿಕ್ ಯೂತ್ ಫೆಡರೇಷನ್) ಪರವಾಗಿ ಭಾಗವಹಿಸಿದರು.

ರಾಜ್ಯ ಸಮಿತಿಯ ಸಭೆ :

ಬೆಳೆಯುತ್ತಿರುವ ವಿದ್ಯಾರ್ಥಿ ಸಮಸ್ಯೆಗಳ ಪರಿಹಾರಕ್ಕಾಗಿ ಸಂಘಟನೆಯನ್ನು ಇನ್ನಷ್ಟು ಬಲಗೊಳಿಸುವ ದೃಷ್ಟಿಯಿಂದ 5 . 8 . 79 ರಂದು ಬೆಂಗಳೂರಿನಲ್ಲಿ ಎಸ್. ಎಫ್. ಐ. ರಾಜ್ಯಸಮಿತಿಯ ವಿಸ್ತೃತ ಸಭೆಯನ್ನು ಕರೆಯಲಾಗಿದ್ದು ಈ ಸಭೆಯಲ್ಲಿ ಕೇಂದ್ರ ಸಮಿತಿಯ ಅಧ್ಯಕ್ಷರಾದ ಕಾಂ. ಎಂ. ಎ. ಬೇಬಿಯವರು ಹಿಂದಿನ ರಾಜ್ಯಸಮಿತಿಯ ಪ್ರಮುಖ ಸದಸ್ಯರುಗಳು ಸಹ ಭಾಗವಹಿಸಲಿರುವುದು ಸಭೆಯ ವಿಶೇಷತೆಯಾಗಿದೆ. ಸಭೆಯು 6 ನೇ ತಾರೀಖು ಬೆಳಿಗ್ಗೆಯೂ ಮುಂದುವರಿಯುವ ನಿರೀಕ್ಷೆಯಿದೆ. ●

ನಗರಸಭೆ ಕಾರ್ಮಿಕರ ಬೇಡಿಕೆಗಳಿಗೆ ಮನ್ನಣೆ

ಮೈಸೂರು ನಗರ ಸಮಿತಿಯ ಕಮೀಷನರ್‌ರವರು ನಗರಸಮಿತಿಯ ಪೌರಕಾರ್ಮಿಕರ ಬೇಡಿಕೆಗಳನ್ನು ಪರಿಶೀಲಿಸಿ ಅವುಗಳ ಬಗ್ಗೆ ನಗರ ಸಮಿತಿಯ ಆಡಳಿತಗಾರರಿಗೂ ಮತ್ತು ಮೈಸೂರು ಸಿಟಿ ಕಾರ್ಪೊರೇಷನ್ ಎಂಪ್ಲಾಯೀಸ್ ಯೂನಿಯನ್ನಿನ ಪದಾಧಿಕಾರಿಗಳಿಗೂ ನಡುವೆ ಮಾತುಕತೆಗಳು ನಡೆದು, ಒಂದು ಒಮ್ಮತದ ಅಭಿಪ್ರಾಯಕ್ಕೆ ಬಂದಿರುವುದರಿಂದ ತಾ.17.7.79 ರಿಂದ ನಡೆಯಬೇಕಾಗಿದ್ದ ಪೌರಕಾರ್ಮಿಕರ ಮುಷ್ಕರವನ್ನು ನಿಲ್ಲಿಸಲಾಗಿದೆ ಎಂಬುದಾಗಿ ಸಂಘದ ಅಧ್ಯಕ್ಷರಾದ ಕಾಂ. ಎಂ. ಎನ್ ಉಗ್ರಪ್ಪನವರು ತಿಳಿಯಪಡಿಸಿರುತ್ತಾರೆ.

ಆರ್ಥಿಕ ಸಮೀಕ್ಷೆ:

[3ನೇ ಪುಟದಿಂದ]

ನೀಡಬೇಕಾದೀತು. ಇದರಿಂದ, ಸಂಪನ್ಮೂಲಗಳು ಆರ್ಥಿಕ ಅಭಿವೃದ್ಧಿ, ಉತ್ಪಾದನೆಗಳಿಗೆ ಸಿಗುವುದು ಕಡಿಮೆಯಾದೀತೆಂಬ ಭಯವೂ ಇದೆ.

ಧನಸಹಾಯದ ಭರವಸೆಯಿಲ್ಲ!:

ಆರ್ಥಿಕಬಿಕ್ಕಟ್ಟು, ಸಂಪನ್ಮೂಲಗಳ ಕೊರತೆ, ಬೆಲೆಯೇರಿಕೆ, ನಿರುದ್ಯೋಗ, ಮುಂತಾದ ಸಮಸ್ಯೆಗಳು ಹೆಚ್ಚುತ್ತಿದ್ದಂತೆ, ಕೇಂದ್ರ ಸರಕಾರವು ರಾಜ್ಯ ಸರಕಾರಗಳ ವೆಚ್ಚದ ಮೇಲೆ ಬಿಗು ನಿಯಂತ್ರಣ ವಿಧಿಸುತ್ತದೆ. ಅವುಗಳ ಅಭಿವೃದ್ಧಿ ಯೋಜನೆಗಳಿಗೂ ಮುಟ್ಟುಗೋಲು ಹಾಕುತ್ತದೆ. ಕರ್ನಾಟಕ ಸರಕಾರ ಒಂದೇ ಸಾರ್ವಜನಿಕ ವಿತರಣೆಯನ್ನು ಜಾರಿಗೊಳಿಸಲು ಕೇಂದ್ರ ಸರಕಾರದಿಂದ ರೂ. 10 ಕೋಟಿ ಸಹಾಯಧನ ಕೇಳಿದೆ. ಇತರ ರಾಜ್ಯಗಳೂ ಕೇಂದ್ರದ ನೆರವು ಕೇಳಿರುವುದರಿಂದ, ಹೊಸ ಯೋಜನೆಯ ಯಶಸ್ಸಿಗೆ ನೂರಾರು ಕೋಟಿ ಹಣ ಸಹಾಯದ ಅಗತ್ಯವಿದೆ. ಆದರೆ, ಸಾರ್ವಜನಿಕ ವಿತರಣೆಯ ಹೊಸ ಯೋಜನೆಯು ಜಾರಿಗೆ ಬಂದ ದಿನವೇ, ಕೇಂದ್ರ ಹಣಕಾಸು ಮಂತ್ರಿ ಚರಣ್‌ಸಿಂಗ್ ಅವರು ರಾಜ್ಯ ಸರಕಾರಗಳು ತಮ್ಮ ಸಾರ್ವಜನಿಕ ವೆಚ್ಚಗಳನ್ನು ಕಡಿಮೆ ಮಾಡಬೇಕೆಂದೂ, ಅನುತ್ಪಾದಿತ ವಿಷಯಗಳಿಗೆ ಕೇಂದ್ರವು ಸಹಾಯ ನೀಡಲಾರದೆಂದೂ, ರಿಸರ್ವ್‌ಬ್ಯಾಂಕಿನಿಂದ ರಾಜ್ಯ ಸರಕಾರಗಳು ಓವರ್ ಡ್ರಾಫ್ಟ್ ಮಾಡಕೂಡದೆಂದೂ ಸುಗ್ರೀವಾಜ್ಞೆಯ ಸುತ್ತೋಲೆ ಕಳಿಸಿದ್ದಾರೆ! ಪ್ರಸ್ತುತದ ರಾಜಕೀಯ ಬಿಕ್ಕಟ್ಟಿನಿಂದಾಗಿ, ಹೊಸ ಯೋಜನೆಯು ಬರೆದ ಕಾಗದದಲ್ಲಿಯೇ ಉಳಿದರೂ ಆಶ್ಚರ್ಯವೇನಿಲ್ಲ!

ಅಸಂಘಟಿತ ಜನಕೋಟಿ :

ದೇಶದಲ್ಲಿ ಬಹುಪಾಲು ಜನರು ಬಡವರೂ, ನಿರಕ್ಷರಸ್ಥರೂ ಮತ್ತು ಅಸಂಘಟಿತರೂ ಆಗಿರುವುದರಿಂದ ಸಾರ್ವಜನಿಕ ವಿತರಣಾ ವ್ಯವಸ್ಥೆಯು ಯಶಸ್ವಿಯಾಗುವುದು ಇನ್ನಷ್ಟೂ ಕಷ್ಟವಾಗಿದೆ. ಈ ಹಿಂದಿನ ಅನುಭವದಂತೆ, ಸಕ್ಕರೆ, ಹಾಲು, ಆಹಾರ ಧಾನ್ಯಗಳು, ಇತ್ಯಾದಿ ಅವಶ್ಯಕ ವಸ್ತುಗಳನ್ನು ಸಾರ್ವಜನಿಕ ವಿತರಣೆಯ ಮೂಲಕ ಒದಗಿಸುವಾಗ, ಬಹುಪಾಲು ಅನುಕೂಲವಂತರಿಗೇ ಹೆಚ್ಚಿನ ಪ್ರಯೋಜನವಾಗುತ್ತಿತ್ತೇ ವಿನಹ ದುರ್ಬಲವರ್ಗದವರಿಗಲ್ಲ. ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಅಧಿಕಾರಿಗಳ ಅದಕ್ಷತೆ, ಭ್ರಷ್ಟಾಚಾರ, ಅಲಕ್ಷತೆಗಳೂ ನಮ್ಮ ಅನುಭವದಲ್ಲಿವೆ. ಅವಶ್ಯಕ ವಸ್ತುಗಳನ್ನು ಸಾರ್ವಜನಿಕ ವಿತರಣೆಯ ಮೂಲಕ ಹಂಚುವ ಮೂಲಕ ಅನುಕೂಲವಂತ ಜನರು ಹೆಚ್ಚು ಪ್ರಯೋಜನಪಡೆದು, ದುರ್ಬಲ ವರ್ಗದವರು ಕೊರತೆ ಪರಿಸ್ಥಿತಿಗಳಿಂದ ಇನ್ನಷ್ಟು ತೊಂದರೆಗೊಳಗಾದ ಅನುಭವಗಳೂ ಇವೆ. ಸಾರ್ವಜನಿಕ ವಿತರಣೆಗಾಗಿ ಉತ್ಪಾದಿತ ವಸ್ತುಗಳನ್ನು ಖರೀದಿಸುವಾಗಲೂ ಮತ್ತು ಅವುಗಳನ್ನು ಸಾರ್ವಜನಿಕರಿಗೆ ಮರು ವಿತರಣೆ ಮಾಡುವಾಗಲೂ ಸರಕಾರವು ಸಾಕಷ್ಟು ಧನಸಹಾಯ ನೀಡಬೇಕಾದುದರಿಂದ, ಅದರ ಪ್ರಯೋಜನವೂ ದುರ್ಬಲವರ್ಗದವರಿಗೆ ಹೋಗದೆ, ಅನುಕೂಲವಂತರಿಗೆ ಸೇರುವ ಸಂಭವ ಇದೆ.

ವ್ಯಾಪಾರಿಗಳ ಪ್ರತಿಭಟನೆ:

ಬೆಲೆಏರಿಕೆ, ಹಣದುಬ್ಬರಗಳಿಂದಾಗಿ ಮುಕ್ತ ಮಾರುಕಟ್ಟೆಯಲ್ಲಿ ಉತ್ಪಾದಕರೂ-ವ್ಯಾಪಾರಿಗಳೂ ಭಾರೀ ಲಾಭಗಳಿಸುವ ಸುವರ್ಣಾವಕಾಶವಿದೆ. ಕೃಷಿ ಹಾಗೂ ಕೈಗಾರಿಕಾ ಉತ್ಪಾದನೆಗಳೂ, ವ್ಯಾಪಾರಗಳೂ ಹಲವು ದಶಕಗಳಿಂದ ಕೆಲವೇ ಗುತ್ತೇದಾರಿಗಳ ಹತೋಟಿಯಲ್ಲಿದ್ದು, ಕೆಲಸಗಾರರನ್ನೂ, ಗ್ರಾಹಕರನ್ನೂ ಸ್ವೇಚ್ಛೆಯಾಗಿ ಶೋಷಿಸಲು ಅವರಿಗೆ ಅವಕಾಶವಿರುತ್ತಿತ್ತು. ಅವರು ಗಳಿಸಿದ ಲಾಭಗಳಲ್ಲಿ ಬಹುಪಾಲು ಲೆಕ್ಕಕ್ಕೇ ಸಿಗದೆ ಕಪ್ಪುಹಣವಾಗಿ ಇಂದು ದೇಶದಲ್ಲಿ ಸಮಾನಾಂತರವಾದ ಇನ್ನೊಂದು ಆರ್ಥಿಕ ವ್ಯವಸ್ಥೆ ನಿರ್ಮಾಣವಾಗಿದೆ. ಹೀಗಿರುವಾಗ, ಅವರ ಲಾಭದಾಯಕವಾದ ವ್ಯವಹಾರಗಳಲ್ಲಿ ಸರಕಾರವು ಹಸ್ತಕ್ಷೇಪ ಮಾಡುವುದನ್ನು ಅವರು ಸರ್ವಥಾವಹಿಸಲಾರರು. ಇತ್ತೀಚೆಗೆ ಉ. ಪ್ರದೇಶದಲ್ಲಿ ವ್ಯಾಪಕವಾಗಿ ಸಂಭವಿಸಿದ ವ್ಯಾಪಾರಿಗಳ ಮುಷ್ಕರ ಚಳುವಳದ ಮೂಲ ಉದ್ದೇಶವು ಸರಕಾರದ ಸಾರ್ವಜನಿಕ ವಿತರಣಾ ಯೋಜನೆಯನ್ನು ಪ್ರತಿಭಟಿಸುವುದಾಗಿದೆ. ಆ ರಾಜ್ಯದ ವ್ಯಾಪಾರಿಗಳ ಮಾರಾಟ ತೆರಿಗೆಯ ಹೊರೆಯನ್ನು ಪುನಃವಿಮರ್ಶಿಸಲು ಹೋರಾಟ ರಾಜ್ಯ ಸರಕಾರವನ್ನು ತಾತ್ಕಾಲಕ್ಕೆ ವ್ಯಾಪಾರಿಗಳು ಸಂಘಟಿತರಾಗಿ ಹಿಮ್ಮೆಟ್ಟಿಸಿದ್ದಾರೆ! ಇಂತಹ ಪರಿಸ್ಥಿತಿಯಲ್ಲಿ ಸಾರ್ವಜನಿಕ ವಿತರಣೆಯ ಅಂಗಡಿಗಳು ಯಶಸ್ವಿಯಾಗಿ ಕಾರ್ಯ ನಿರ್ವಹಿಸುವುದು ಎಷ್ಟು ಕಷ್ಟ ಎಂದು ಸ್ಪಷ್ಟವಾಗುವುದು.

ಪ್ರಜಾಸತ್ತಾತ್ಮಕ ಶಕ್ತಿಗಳ ಪಾತ್ರ:

ಉತ್ಪಾದಕರ, ದಳ್ಳಾಳಿಗಳ ಮತ್ತು ವ್ಯಾಪಾರಿಗಳ ಶೋಷಣೆಯಿಂದ ಜನಕೋಟಿಯನ್ನು ಮುಕ್ತಗೊಳಿಸಲು ಅವಶ್ಯಕ ವಸ್ತುಗಳನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಒದಗಿಸುವ ಅಗತ್ಯತೆಯನ್ನೂ ಪ್ರಯೋಜನವನ್ನೂ ಸಾರ್ವಜನಿಕರಿಗೆ ತಿಳಿಯಪಡಿಸುವುದರಲ್ಲಿ ಪ್ರಜಾಸತ್ತಾತ್ಮಕ ಶಕ್ತಿಗಳು ಸಕ್ರಿಯ ಭಾಗವಹಿಸಬೇಕು. ಹೊಸ ಯೋಜನೆಯ ಇತಿಮಿತಿಗಳನ್ನು ಗಮನದಲ್ಲಿಟ್ಟುಕೊಂಡು, ಅದರ ಯಶಸ್ವಿಗಾಗಿ ರೈತರ, ಕೃಷಿಕಾರ್ಮಿಕರ, ಕೈಗಾರಿಕಾ ಕಾರ್ಮಿಕರ, ನೌಕರರ, ವಿದ್ಯಾರ್ಥಿ ಯುವಜನರ, ಮಹಿಳೆಯರ, ಗ್ರಾಹಕರ ಸಂಘ ಸಂಸ್ಥೆಗಳು ಸಕ್ರಿಯವಾಗಿ ಶ್ರಮಿಸಬೇಕು. ಅಧಿಕಾರಿಗಳ ಅದಕ್ಷತೆ, ಅಲಕ್ಷತೆ, ಭ್ರಷ್ಟಾಚಾರಗಳನ್ನು ಬಯಲಿಗೆಳೆಯಬೇಕು. ಅವುಗಳ ವಿರುದ್ಧ ಸಾಕಷ್ಟು ಜನಜಾಗೃತಿಯನ್ನುಂಟುಮಾಡಬೇಕು. ಸಾರ್ವಜನಿಕ ಉತ್ಪಾದನೆಯು ಅಂತಿಮವಾಗಿ ಯಶಸ್ವಿಯಾಗಲು ಕೃಷಿ ಹಾಗೂ ಕೈಗಾರಿಕಾ ಉತ್ಪಾದನೆಗಳೂ, ಸಗಟು ಮತ್ತು ಚಿಲ್ಲರೆ ವ್ಯಾಪಾರಗಳೂ ಸಾರ್ವಜನಿಕ ಅಥವಾ ಸಹಕಾರಿ ಕ್ಷೇತ್ರಗಳಲ್ಲಿರಬೇಕೆಂದೂ ಜನರಿಗೆ ಮನದಟ್ಟುಮಾಡಿಕೊಡಬೇಕು. ಉತ್ಪಾದನಾ ವಸ್ತುಗಳನ್ನು ಖರೀದಿಸುವಾಗ ಮತ್ತು ಮರು ವಿತರಣೆ ಮಾಡುವಾಗ ಸರಕಾರವು ನೀಡುವ ಸಹಾಯ ಧನದ ಪ್ರಯೋಜನವು ದುರ್ಬಲವರ್ಗದವರಿಗೇ ಹೆಚ್ಚಾಗಿ ಪ್ರಯೋಜನವಾಗುವಂತೆ ಜಾಗರೂಕತೆವಹಿಸಿಕೊಳ್ಳಬೇಕು. ಸಾರ್ವಜನಿಕ ವಿತರಣೆಯ ಪ್ರಯೋಜನವೂ ಹೆಚ್ಚಾಗಿ ದುರ್ಬಲವರ್ಗದವರಿಗೇ ಸೇರುವಂತೆ ಶ್ರಮಿಸಬೇಕು. ವ್ಯಾಪಾರಿಗಳ ಪ್ರತಿಭಟನೆಯನ್ನು ಹತ್ತಿಕ್ಕಬೇಕು. ಆರ್ಥಿಕ ವ್ಯವಸ್ಥೆಯಲ್ಲಿ ಮೂಲಭೂತ ಬದಲಾವಣೆಗಾಗಿ-ಹೆಚ್ಚುವರಿ ಭೂಮಿಯನ್ನು ಬಡರೈತರಿಗೂ ಕೃಷಿಕಾರ್ಮಿಕರಿಗೂ ಹಂಚುವುದು, ಗುತ್ತೇದಾರಿ ಹಾಗೂ ವಿದೇಶಿ ಕೈಗಾರಿಕೆಗಳನ್ನೂ ವ್ಯಾಪಾರಗಳನ್ನೂ ರಾಷ್ಟ್ರೀಕರಿಸುವುದು, ಜನರ ಗ್ರಾಹಕಶಕ್ತಿಯು ಹೆಚ್ಚುವಂತೆ ಕೃಷಿ ಹಾಗೂ ಕೈಗಾರಿಕಾ ಕಾರ್ಮಿಕರಿಗೆ ಜೀವನಾವಶ್ಯಕ ವೇತನ ನೀಡುವುದು-ಮುಂತಾದ ಪ್ರಜಾಸತ್ತಾತ್ಮಕ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಹೋರಾಡಬೇಕು. ●

ರಾಯಚೂರು

ಪವರ್ ಕಾರ್ಪೊರೇಷನ್ ಉದ್ದಿಮೆಯಲ್ಲಿ

“ಶಿಫಾರಸು ಮತ್ತು ಭ್ರಷ್ಟಾಚಾರ”

ರಾಯಚೂರು ನಗರದಲ್ಲಿ ಸ್ಥಾಪಿತವಾಗಿರುವ ಮೈಸೂರ್ ಪವರ್ ಕಾರ್ಪೊರೇಷನ್ ಲಿಮಿಟೆಡ್ ಸಾರ್ವಜನಿಕ ಕ್ಷೇತ್ರದಲ್ಲಿದ್ದು ನಮ್ಮ ಜಿಲ್ಲೆಯ ಕಾಲುಭಾಗ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಿಕೊಡುವ ಆಶಾಕಿರಣವಾಗಿರುತ್ತದೆ. ದೇವಸಗೂರ ಹಳ್ಳಿಯಲ್ಲಿ ನಿರ್ಮಾಣವಾಗುತ್ತಿರುವ ಈ ಬೃಹತ್ ಉದ್ದಿಮೆಯು ಈಗಾಗಲೇ “ನಾನ್ ಕಾರ್ಪೊರೇಟ್ ಕೆಲಸಗಾರರ ವಿಭಾಗಕ್ಕೆ” ಬಹಳಷ್ಟು ಪದವೀಧರ ಮತ್ತು ಮೆಟ್ರಿಕ್ಯುಲೇಟ್ಸ್ ಯುವಜನರನ್ನು ನೇಮಕ ಮಾಡಿಕೊಳ್ಳುತ್ತಿದ್ದಾರೆ.

ಸಹಾಯಕ, ಲೆಕ್ಕಪತ್ರ ನಿರ್ವಾಹಕ, ಟೈಪಿಸ್ಟ್, ಡ್ರೈವರ್ಸ್ ಮುಂತಾದ ಹುದ್ದೆಗಳ ನೇಮಕ ಮಾಡಿಕೊಳ್ಳುವಲ್ಲಿ ಯಾವ ಜಾಹಿರಾತು ಸ್ಥಳೀಯ ಪತ್ರಿಕೆಗಳಲ್ಲಾಗಲಿ, ತಮ್ಮ ನೋಟೀಸ್ ಬೋರ್ಡ್‌ನಲ್ಲಾಗಲಿ ಅಥವಾ ಉದ್ಯೋಗ ವಿನಿಮಯ ಕೇಂದ್ರದಿಂದ ನಿರುದ್ಯೋಗಿಗಳ ಪಟ್ಟಿಯನ್ನು ಕ್ರಮಾಂಕದಿಂದ ಪರಿಶೀಲನೆ ಮಾಡದೆ ಗುಪ್ತವಾಗಿ ಇಂಟರ್‌ವ್ಯೂ ತೆಗೆದುಕೊಂಡು ಸಂಪೂರ್ಣವಾಗಿ ಉದ್ದಿಮೆಯ ಕಾನೂನನ್ನು ಉಲ್ಲಂಘಿಸಿ ತಮ್ಮ ತಮ್ಮ ಅಭ್ಯರ್ಥಿಗಳನ್ನು (ಸುಮಾರು 30 ಜನರನ್ನು) ನೇಮಕ ಮಾಡಿಕೊಂಡಿರುತ್ತಾರೆ.

ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (D. Y. F.) ಜಿಲ್ಲಾ ಸಮಿತಿಯು ದಿನಾಂಕ 16-6-1979 ರಂದು ಬೆಂಗಳೂರಿನಿಂದ ಆಗಮಿಸಿದ M. P. C. L. ಉದ್ದಿಮೆಯ ಜನರಲ್ ಮ್ಯಾನೇಜರ್‌ರೊಂದಿಗೆ ಮೇಲೆ ಹೇಳಿದ ವಿಷಯದ ಬಗ್ಗೆ ಕೂಲಂಕುಶವಾಗಿ ಚರ್ಚಿಸಲಾಯಿತು. ಅವರು ಕೂಡ ಎಲ್ಲಾ ಶಿಫಾರಸು ಮತ್ತು ಭ್ರಷ್ಟಾಚಾರದಿಂದ ಕೂಡಿದ ಪಟ್ಟಿಯನ್ನು ಕೂಡಲೆ ವಜಾ ಮಾಡುತ್ತೇನೆಂದು ಆಶ್ವಾಸನೆಕೊಟ್ಟಿದ್ದರು. ಆದರೆ ಇಂದಿಗೆ ಒಂದು ತಿಂಗಳಾದರೂ ಅಧಿಕಾರಿಗಳಿಂದ ಹಿಡಿದು ಸ್ಥಳೀಯ ರಾಜಕಾರಣಿಗಳ ಹಸ್ತದಿಂದ ತಯಾರಾದ ಭ್ರಷ್ಟಾಚಾರ ಮತ್ತು ಕಾನೂನು ಬಾಹಿರಪಟ್ಟಿಯನ್ನು ರದ್ದುಪಡಿಸಿಲ್ಲ.

ಆದ್ದರಿಂದ ಪ್ರತಿಯೊಂದು ಸರಕಾರಿ ಹಾಗೂ ಖಾಸಗಿ ಇಲಾಖೆಗಳ ನೇಮಕ ಆಯೋಗದಲ್ಲಿ ನಡೆಯುತ್ತಿರುವ ಇಂಥ ಭ್ರಷ್ಟಾಚಾರ ಮತ್ತು ಶಿಫಾರಸನ್ನು ತಡೆಹಿಡಿಯಲು ಜಿಲ್ಲೆಯ ಸಮಸ್ತ ಯುವಜನರು ಮತ್ತು ನಿರುದ್ಯೋಗಿಗಳು ಒಗ್ಗಟ್ಟಾಗಿ ಈ ಕೆಳಗಿನ ಬೇಡಿಕೆಗಳನ್ನು ಮುಂದಿಟ್ಟು ಹೋರಾಟ ಮಾಡಬೇಕೆಂದು D. Y. F. ಜಿಲ್ಲಾ ಸಮಿತಿಯು ಕರೆ ನೀಡಿದೆ.

D. Y. F. ನ ಲಂಚ ನಿರ್ಮೂಲನಾ ವಿಧಾನಗಳು:-

1) ವಿಭಾಗೀಯ, ಜಿಲ್ಲಾ ಮತ್ತು ತಾಲ್ಲೂಕು ನೇಮಕ ಆಯೋಗ (Recruitment committee) ದಲ್ಲಿ ಲಂಚ ಮತ್ತು ಶಿಫಾರಸನ್ನು ಕಂಡುಹಿಡಿಯಲು D. Y. F. ನ ಪ್ರತಿನಿಧಿಗಳನ್ನು ವೀಕ್ಷಕರೆಂದು ಪರಿಗಣಿಸಬೇಕು.

2) ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ ಸಮಿತಿಗೆ ಲಂಚ ಸಾಮ್ರಾಜ್ಯವನ್ನು ಕಂಡುಹಿಡಿದು ಹೋರಾಟ ಮಾಡಲು ಸರಕಾರವು ಅಧಿಕಾರ ಸೂಚಕ ಪತ್ರವನ್ನು ಕೊಡಬೇಕು.

3) ಲಂಚಕೋರರೆಂದು ಪರಿಗಣಿಸಿದ ಮೇಲೆ ಸರಕಾರವು ಪ್ರತಿ ತಿಂಗಳು ಜಿಲ್ಲಾ ಮಟ್ಟದ ಸಾರ್ವಜನಿಕ ಸಭೆಯನ್ನುಕರೆದು ಅವರ ಚಾರ್ಜ್ ಶೀಟನ್ನು ಓದಿ ಜನರಿಗೆ ಲಂಚದ ವಿಧಾನಗಳನ್ನು ತಿಳಿಸಬೇಕು ಮತ್ತು ಪ್ರತಿ ಇಲಾಖೆಯಲ್ಲಿ ಅವರ ಫೋಟೊ ಹಚ್ಚಿ “ಲಂಚಕೋರರಿದ್ದಾರೆ ಎಚ್ಚರಿಕೆ” ಎಂಬುದನ್ನು ಪ್ರಚಾರ ಮಾಡಬೇಕು.

4) ಸರಕಾರವು ಲಂಚ ನಿರ್ಮೂಲನವನ್ನು ಪ್ರೋತ್ಸಾಹಿಸಲು ಹಿಡಿದು ಕೊಟ್ಟ ವ್ಯಕ್ತಿ ಮತ್ತು ಸಂಘಟನೆಗಳಿಗೆ 100 ರೂಪಾಯಿ ಬಹುಮಾನ ಕೊಡಬೇಕು.

5) ಜಿಲ್ಲಾ ಕೋರ್ಟಿನಲ್ಲಿ “ಲಂಚ ಸ್ವೀಕರಿಸಿಲ್ಲಾ” ಎಂಬುವ ಜವಾಬ್ದಾರಿಯನ್ನು ಭ್ರಷ್ಟಾಚಾರಿ ಅಧಿಕಾರಿಗಳು ಸಾಧಿಸಬೇಕೇ ಹೊರತು ಜನತೆ ಅಲ್ಲ.

○

ಸೈಕಲ್ ರಿಕ್ಷಾ ಚಾಲಕರಿಂದ ರಾಯಚೂರಲ್ಲಿ

ಬೃಹತ್ ಮೆರವಣಿಗೆ

ರಾಯಚೂರು ನಗರದಲ್ಲಿ ಸುಮಾರು 5000 ಸೈಕಲ್ ರಿಕ್ಷಾ ಚಾಲಕರಿರುವರು. ಹನ್ನೆರಡು ಗಂಟೆಗೆ ರೂ. 3.25 ಬಾಡಿಗೆ ತೆತ್ತು ಮಾಲಕರಿಂದ ಸೈಕಲ್ ರಿಕ್ಷಾ ಪಡೆದು, ದಿನವಿಡೀ ಬೆವರಿಳಿಸಿ ರಿಕ್ಷಾ ಓಡಿಸುವ ಇವರ ಜೀವನ ಅತೀ ದಾರುಣವಾಗಿದೆ. ತಗ್ಗು ದಿನ್ನೆಗಳಿಂದ ಕೂಡಿದ, ಏರು ಮತ್ತು ತಿರುವುಗಳಿಂದ ಕೂಡಿದ ರಸ್ತೆಯ ಮೇಲೆ ಸೈಕಲ್ ರಿಕ್ಷಾ ತುಳಿಯುವುದು ಅತಿ ಪ್ರಯಾಸದ ಕೆಲಸವಾದರೆ, ಇನ್ನೊಂವೆಡೆ ಪೋಲೀಸರ ಲಂಚ ಮತ್ತು ಕಿರುಕುಳ ಇನ್ನೊಂದೆಡೆ. ತಿಂಗಳಿನ “ಮಾಮೂಲಿ” ದೊರೆಯದಿದ್ದಲ್ಲಿ ಚಾಲಕರ ಮೇಲೆ ಕೇಸು ಹಾಕುವುದು ಸರ್ವೇ ಸಾಮಾನ್ಯವಾಗಿದೆ. ತೀವ್ರವಾದ ಸಮಸ್ಯೆಗಳ ವಿರುದ್ಧ ಹೋರಾಡಲು ತೀರ್ಮಾನಿಸಿ, ಇತ್ತೀಚೆಗೆ ಸಂಘಟಿತರಾದ ರಿಕ್ಷಾಚಾಲಕರು ಪೋಲೀಸರ ದಬ್ಬಾಳಿಕೆಯ ವಿರುದ್ಧ ಹೋರಾಡಲು ನಿರ್ಣಯಿಸಿದರು.

ತಾ. 11-7-79ರಂದು ತಮ್ಮ ರಿಕ್ಷಾ ಚಾಲು ಮಾಡದೆ ಸಹಸ್ರಾರು ಚಾಲಕರು ರಾಯಚೂರು ನಗರದ ತೀನ್ ಕಂದಿಲ್ಲಿನಲ್ಲಿ ಸಭೆ ಸೇರಿದರು. ಕಾಂ. ಸಿ. ಎಸ್. ಬಾಳಿ, ಅಡ್ವೊಕೇಟ್ ಇವರು ಸಭೆಯನ್ನುದ್ದೇಶಿಸಿ ಭಾಷಣ ಮಾಡಿದರು. ಶ್ರಮಜೀವಿಗಳ ಸಂಘಟನೆಯ ಅಗತ್ಯದ ಬಗ್ಗೆ ವಿವರಿಸುತ್ತಾ, ಹೋರಾಟಕ್ಕೆ ಕರೆ ಇತ್ತರು. ಹತ್ತೂವರೆ ಘಂಟೆಗೆ ಸರಿಯಾಗಿ ಕಾಂ. ಶ್ಯಾಮಸುಂದರ್, ಕಾಂ. ಪುರುಷೋತ್ತಮ, ಕಾಂ. ಸಿ. ಎಸ್. ಬಾಳಿ ಮತ್ತು ಕಾಂ. ರಿಝ್ವಾನಾ ಇವರುಗಳ ನೇತೃತ್ವದಲ್ಲಿ ಚಾಲಕರ ಬೃಹತ್ ಮೆರವಣಿಗೆಯು ನಗರದ ಬೀದಿ ಬೀದಿಗಳನ್ನು ಸುತ್ತಿ ಜಿಲ್ಲಾಧಿಕಾರಿಯವರ ಕಛೇರಿಗೆ ಹೋಯಿತು. ಜಿಲ್ಲಾಧಿಕಾರಿಗಳನ್ನು ಭೆಟ್ಟಿಯಾಗಿ, ಸಮಸ್ಯೆಗಳ ಬಗ್ಗೆ ಚರ್ಚಿಸಿದ ನಂತರ, ಮುಖ್ಯ ಬೇಡಿಕೆಗಳನ್ನು ಜಿಲ್ಲಾಧಿಕಾರಿಯವರು ಒಪ್ಪಿದರು. ನೆರೆದ ಸಹಸ್ರಾರು ಚಾಲಕರನ್ನುದ್ದೇಶಿಸಿ ಕಾಂ. ಪುರುಷೋತ್ತಮ ಮತ್ತು ಕಾಂ. ಬಾಳಿ ಮಾತನಾಡಿದರು.

ಸಹಸ್ರಾರು ಚಾಲಕರಿಂದ ಕೂಡಿದ ಈ ಬೃಹತ್ ಮೆರವಣಿಗೆಯು ರಾಯಚೂರಿನ ಇತಿಹಾಸದಲ್ಲೇ ಮೊದಲನೆಯದಾಗಿದೆ.

○

....ವಾಮರಂಗ ಸರ್ಕಾರದ ಭೂಸುಧಾರಣೆ

[ಒಂದನೇ ಪುಟದಿಂದ]

ದಮನವನ್ನು ತಡೆಹಿಡಿದಿದೆ. ಹೀಗೆ ಸಣ್ಣ ಮತ್ತು ಮಧ್ಯಮವರ್ಗದ ರೈತರ ಹಿತ ಕಾಪಾಡಿದೆ.

ಬಡ ಬಾರ್ಗದಾರರ (ಬೆಳೆಕುಯಿಲು ಮಾಡುವವರು) ಬೆಳೆಯುವ ಹಕ್ಕನ್ನು ಕಾಪಾಡಲು ಮತ್ತು ಅವರನ್ನು ಒಕ್ಕಲೆಬ್ಬಿಸುವುದನ್ನು ತಡೆಯಲು ವಾಮರಂಗ ಸರ್ಕಾರವು ಭೂಸುಧಾರಣಾ ಕಾಯಿದೆಯಲ್ಲಿ ಒಂದು ಮೂಲಭೂತ ತಿದ್ದುಪಡಿಯನ್ನು ಮಾಡಿದೆ. ತಿದ್ದುಪಡಿ ಕಾಯಿದೆಯ ಪ್ರಕಾರ, ಬಾರ್ಗದಾರನು ತನ್ನ ಅರ್ಹತೆಗಳನ್ನು ಸಿದ್ಧಪಡಿಸಿ ತೋರಿಸಬೇಕಾಗಿಲ್ಲ. ಬಾರ್ಗದಾರರನ್ನು ಒಕ್ಕಲೆಬ್ಬಿಸುವುದು ಸೆರೆ ಮತ್ತು ದಂಡಗಳನ್ನೊಳಗೊಂಡು ಶಿಕ್ಷಾರ್ಹ ಅಪರಾಧವಾಗುತ್ತದೆ. ಇದರ ಪರಿಣಾಮವಾಗಿ ಬಾರ್ಗದಾರರನ್ನು ಇಡಿಯಾಗಿ ಒಕ್ಕಲೆಬ್ಬಿಸುವುದು ನಿಂತು ಹೋಗಿದೆ.

ಹಳ್ಳಿಗಳ ದುರ್ಬಲವರ್ಗಗಳ ಹಿತಾಸಕ್ತಿಗಳ ರಕ್ಷಣೆಯ ಮಾರ್ಗದಲ್ಲಿ ಬರುವ ಅಡೆತಡೆಗಳ ನಿವಾರಣೆಯಿಂದ, ಏಪ್ರಿಲ್ 1979ರ ವೇಳೆಗೆ 6.66 ಲಕ್ಷ ಬಾರ್ಗದಾರರ ಹೆಸರುಗಳನ್ನು ದಾಖಲು ಪಡೆಯುವುದು ಸಾಧ್ಯವಾಗಿದೆ.

ಹಿಂದೆ ದಾಖಲಾತಿ ಮಾಡಿದ ಪ್ರಮಾಣದ ಜೊತೆ ಹೋಲಿಸಿದರೆ, ಈ ಬಾರಿಯ ದಾಖಲಾತಿ ಶೇಕಡಾ 300 ರಷ್ಟು ಹೆಚ್ಚಿದೆ. ಇದು ಹಿಂದೆಂದೂ ಇರಲಿಲ್ಲ. ಹೆಸರುಗಳ ದಾಖಲಾತಿಯಿಂದ ಕಳೆದ ಸುಗ್ಗಿ ಕಾಲವು ಶಾಂತಿಯುತವಾಗಿದ್ದು, ಈ 'ಬಾರ್ಗ ಯೋಜನೆ' ಇನ್ನೂ ಮುಂದುವರಿಯುತ್ತಿದೆ.

ಭೂಮಿತಿಯನ್ನು ಮೀರಿದ ಜಮೀನಿನ ಸ್ವಾಧೀನ ನಡೆಯುತ್ತಿದೆ. ಪ್ರತಿ ತಿಂಗಳು ಸರಾಸರಿ 3500 ಎಕರೆಗಳಷ್ಟು ಜಮೀನು ಸರ್ಕಾರದ ವಶಕ್ಕೆ ಬರುತ್ತಿದೆ. ಕಳೆದ ಡಿಸೆಂಬರ್ 31ರ ವೇಳೆಗೆ 11.12 ಲಕ್ಷ ಎಕರೆಗಳಷ್ಟು ಜಮೀನು ಸರ್ಕಾರದ ಕೈಗೆ ಬಂದಿದೆ. ಇದರಲ್ಲಿ 1.65 ಲಕ್ಷ ಎಕರೆ ಜಮೀನು ನ್ಯಾಯಾಲಯದ ತಡೆ ಪಡೆದಿದೆ. ಈ ತಡೆ ಹಿಡಿದ ಜಮೀನನ್ನು ಪಡೆಯಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆ. 3.45 ಲಕ್ಷ ಎಕರೆಗಳ ಭೂಮಿಯನ್ನು ಸದ್ಯದಲ್ಲೇ ಹಂಚಲಾಗುತ್ತದೆ. ಪಂಚಾಯತುಗಳು ಶಾಶ್ವತ ಭೂಸುಧಾರಣಾ ಸಮಿತಿಗಳ ಮೂಲಕ ಅರ್ಹ ವ್ಯಕ್ತಿಗಳಿಗೆ ವಶಪಡಿಸಿಕೊಂಡ ಜಮೀನನ್ನು ಹಂಚುವುದಕ್ಕೆ ಸಿದ್ಧತೆಗಳು ನಡೆಯುತ್ತಿವೆ.

ಹನ್ನೊಂದು ಹಣಕಾಸು ಸಂಸ್ಥೆಗಳ ಮೂಲಕ (ರಾಷ್ಟ್ರೀಕೃತ ಮತ್ತು ಸಹಕಾರಿ ಬ್ಯಾಂಕುಗಳು) ಈ ಖಾರಿಫ್ ಅವಧಿಯಲ್ಲಿ 70 ಸಾವಿರ ಬಾರ್ಗದಾರರು ಮತ್ತು ಪಟ್ಟದಾರರಿಗೆ ಸಾಲದೊರೆಯುವಂತೆ ವಾಮರಂಗ ಸರ್ಕಾರ ವ್ಯವಸ್ಥೆ ಮಾಡಿದೆ. ಯಾರು ನಿಶ್ಚಿತ ಅವಧಿಯಲ್ಲಿ ಬ್ಯಾಂಕಿಗೆ ಸಾಲವನ್ನು ವಾಪಸ್ಸು ಮುಟ್ಟಿಸುವರೋ ಅವರ ಸಾಲದ ಬಡ್ಡಿಯನ್ನು ಸರ್ಕಾರವೇ ಕೊಡುತ್ತದೆ. ನಂತರ ಮತ್ತೆ ಸಾಲ ಪಡೆಯಬಹುದು.

ಕೃಷಿ ಕಾರ್ಮಿಕರು, ಕುಶಲಕರ್ಮಿಗಳು, ಮೀನುಗಾರರು ಮುಂತಾದ ಬಡ ಮನೆಯಿಲ್ಲದ ಹಳ್ಳಿಗರಿಗೆ ಮನೆ ಜಾಗವನ್ನು ಕೊಡಲು ವಾಮರಂಗ ಸರ್ಕಾರ ಕ್ರಮ ಕೈಗೊಂಡಿದೆ. ಬಡವರಾದ ಮನೆಯಿಲ್ಲದ ಹಳ್ಳಿಗರು ಬೇರೊಬ್ಬರ ಜಾಗದಲ್ಲಿ ಮನೆಕಟ್ಟಿಕೊಂಡಿದ್ದರೆ, ಆ ಜಮೀನಿನ ಐದು ಖಾತೆಗಳ ಹಕ್ಕನ್ನು ಅವರೇ ಪಡೆಯುತ್ತಾರೆ. ಹಳ್ಳಿಗಳಲ್ಲಿ ಇಂಥ ಐದು ಖಾತೆ ಜಮೀನಿನ ಒಡೆತನ ಹಕ್ಕಿರುವ ಕುಟುಂಬಗಳ ದಾಖಲಾತಿ ನಡೆಯುತ್ತಿದೆ. ಕಳೆದ ವರ್ಷ ಹೀಗೆ ಮನೆ ಕಟ್ಟಿಕೊಂಡಿದ್ದ 2000 ಮನೆಯಿಲ್ಲದ ಕುಟುಂಬಗಳ ದಾಖಲು ಆಗಿದೆ.

ಭೂಸುಧಾರಣೆ ತುಂಬ ಅವಧಿಯ ಕೆಲಸ. ಅದರ ಜೊತೆಗೆ ಸಂಕೀರ್ಣ ಸ್ವರೂಪದ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಸಮಸ್ಯೆಗಳು ಸೇರಿಕೊಂಡಿವೆ. ಆದರೆ ಭಾರತದ ಸಂಬಂಧದಲ್ಲಿ ಭೂಸುಧಾರಣೆ ಒಂದು ಮೂಲಭೂತ ಪ್ರಶ್ನೆ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ನಿಜವಾದ ಮತ್ತು ಪರಿಣಾಮಕಾರಿಯಾದ ಭೂಸುಧಾರಣೆಗಳನ್ನು ಮಾಡದಿದ್ದರೆ ನಮ್ಮ ಆರ್ಥಿಕ ಪ್ರಗತಿ ಸಾಧ್ಯವಿಲ್ಲ. ಆದ್ದರಿಂದ ಭೂಸುಧಾರಣೆಯ ಬಗ್ಗೆ ವಿಶೇಷ ಆದ್ಯತೆಯನ್ನು ವಾಮರಂಗ ಸರ್ಕಾರ ನೀಡಿದರೆ ಆಶ್ಚರ್ಯವಿಲ್ಲ. ಭೂಸುಧಾರಣೆ ಯೋಜನೆಗಳನ್ನು ಸರ್ಕಾರ ಜಾರಿಗೊಳಿಸುತ್ತಿರುವ ಹಾಗೆಯೇ ಬಡಹಳ್ಳಿಗರು ಪ್ರೋತ್ಸಾಹ, ಉತ್ಸಾಹ, ಸ್ಫೂರ್ತಿಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಅವರು ಬಲಪಡೆದು ಎಚ್ಚರಗೊಳ್ಳುತ್ತಿದ್ದಾರೆ. ಅವರು ಪ್ರಾಮಾಣಿಕರಾಗಿ ಶ್ರದ್ಧಾವಂತರಾಗುತ್ತಿದ್ದಾರೆ. ಅವರಿಗೆ ಜೀವನಶ್ರದ್ಧೆ ತುಂಬಿ ತುಳುಕುತ್ತದೆ ಎಂಬುದನ್ನು ನಾವೆಲ್ಲರೂ ಬಲ್ಲೆವು. ದಬ್ಬಾಳಿಕೆ ಮತ್ತು ಶೋಷಣೆಯಿಂದ ಅವರನ್ನು ಮುಕ್ತಮಾಡಿದರೆ, ಸಮಾಜದ ಬೆಂಬಲದೊಡನೆ ಅವರು, ಈ ಮೊದಲಿಗಿಂತ ಸಾವಿರಪಟ್ಟು ಉತ್ಸಾಹದಿಂದ ದುಡಿದು ನಮ್ಮ ಆರ್ಥಿಕತೆಯ ಪ್ರಗತಿಗೆ ತಳಪಾಯ ಹಾಕುತ್ತಾರೆ. ●

ರಿಕ್ಷಾ ಚಾಲಕರ ಪ್ರತಿಭಟನೆ

[2ನೇ ಪುಟದಿಂದ]

ತಂದರು. ಎಸ್. ಪಿ ಯವರು ಸ್ಥಳದಲ್ಲೇ ವಿಚಾರಣೆ ನಡೆಸಿದರು. ಬಾಲಕೃಷ್ಣರು ತಪ್ಪು ಒಪ್ಪಿ "ಎಲ್ಲಾ ರಿಕ್ಷಾ ಚಾಲಕರ ಸಮಕ್ಷಮದಲ್ಲಿ ಸುರೇಶ್ ಮಲ್ಯರೊಡನೆ ಕ್ಷಮೆ ಯಾಚಿಸಿದರು.

ನ್ಯಾಯವನ್ನು ಪಡೆಯಲು ಯಶಸ್ವಿಯಾದ ರಿಕ್ಷಾ ಚಾಲಕರು ಕೂಡಲೇ ಮುಷ್ಕರವನ್ನು ನಿಲ್ಲಿಸಿ ರಿಕ್ಷಾ ಚಾಲು ಮಾಡಿದರು.

ಶಾಂತ ರೀತಿಯಲ್ಲಿ ನ್ಯಾಯ ಪಡೆಯಲು ಹೋರಾಟ ನಡೆಸಿದ ಎಲ್ಲಾ ರಿಕ್ಷಾ ಚಾಲಕರನ್ನು ದ.ಕ. ಜಿಲ್ಲಾ ರಿಕ್ಷಾ ಚಾಲಕ ಮತ್ತು ಮಾಲಕರ ಸಂಘ ಅಭಿನಂದಿಸಿದೆ. ಅತ್ಯಂತ ಶೀಘ್ರವಾಗಿ ನ್ಯಾಯ ಒದಗಿಸಿದ ಪೋಲೀಸ್ ಅಧಿಕಾರಿಗಳಿಗೆ ಸಂಘವು ಕೃತಜ್ಞತೆ ಸಲ್ಲಿಸಿದೆ.

....ಸಮಾವೇಶದ ಕರೆ

[ಒಂದನೇ ಪುಟದಿಂದ]

ಕ್ಷೇತ್ರದ ಸಂಸ್ಥೆಗಳಲ್ಲಿ ಕೂಲಿಯಲ್ಲಿ, ದ್ವಿಪಕ್ಷೀಯ ಮಾತುಕತೆಗಳಲ್ಲಿ "ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್" ಅಧಿಕಾರಶಾಹೀ ಹಸ್ತಕ್ಷೇಪ ಮಾಡುವುದು ರದ್ದಾಗಬೇಕು.

2. ಪಾಯಿಂಟಿಗೆ ರೂ. 1.30 ಕ್ಕಿಂತಲೂ ಹೆಚ್ಚು ತುಟ್ಟಿಭತ್ಯೆಯನ್ನು ಕೊಡಲು ಹಾಕಿರುವ ನಿರ್ಬಂಧವನ್ನು ಹಿಂತೆಗೆಯಬೇಕು, ಎಲ್ಲಾ ವಿಧದ ಕಾರ್ಮಿಕರಿಗೂ ಜೀವನ ವೆಚ್ಚದ ಏರಿಕೆಗೆ ಸಮನಾಗಿ ತುಟ್ಟಿಭತ್ಯೆ ಸಿಕ್ಕಬೇಕು.

3. ಕಾರ್ಮಿಕ ಸಂಘಗಳೊಂದಿಗೆ ನಡೆಯುತ್ತಿದ್ದ ಮಾತುಕತೆಗಳು ಸರ್ಕಾರದ ಆದೇಶದ ಮೇರೆಗೆ ತಡೆಹಿಡಿಯಲ್ಪಟ್ಟಿರುವಲ್ಲೆಲ್ಲಾ ಕೂಡಲೇ ಮಾತುಕತೆ ಪ್ರಾರಂಭವಾಗಬೇಕು.

4. ಕೈಗಾರಿಕಾ ಸಂಬಂಧಗಳ ಮಸೂದೆ ಮತ್ತು ಆಸ್ಪತ್ರೆಗಳ ಮತ್ತು ಶೈಕ್ಷಣಿಕ ಸಂಸ್ಥೆಗಳ ನೌಕರರಿಗೆ ಸಂಬಂಧಿಸಿದ ಮಸೂದೆಗಳನ್ನು ಹಿಂತೆಗೆದುಕೊಂಡು ಎಲ್ಲಾ ಕಾರ್ಮಿಕರಿಗೂ ಸಂಪೂರ್ಣ ಟ್ರೇಡ್ ಯೂನಿಯನ್ ಹಕ್ಕುಗಳನ್ನು ಕೊಡಬೇಕು.

5. ವಿಮೆ, ತೈಲ ಮತ್ತು ಇತರ ಉದ್ದಿಮೆಗಳಲ್ಲಿ ಕೂಲಿಕಡಿತ, ಬೋನಸ್ ಕಡಿತ, ತುಟ್ಟಿಭತ್ಯೆ ಕಡಿತ, ಮತ್ತು ನೌಕರರ ಇತರ ಭತ್ಯೆಗಳ ಕಡಿತಗಳ ಬಗ್ಗೆ ಆಡಳಿತ ಮಂಡಳಿಗಳು ಕೊಟ್ಟಿರುವ ಸೂಚನೆಗಳನ್ನು ಹಿಂತೆಗೆದುಕೊಳ್ಳಬೇಕು.

6. ಕಡ್ಡಾಯ ಠೇವಣಿಯ ಸುಗ್ರೀವಾಜ್ಞೆಯನ್ನು ಹಿಂತೆಗೆದುಕೊಂಡು 1979ರ ಆಗಸ್ಟ್ 15ಕ್ಕೆ ಮೊದಲು ಬಾಕಿಯಿರುವ ಕಡ್ಡಾಯ ಠೇವಣಿಯ ಕಂತುಗಳನ್ನು ಎಲ್ಲಾ ಕಾರ್ಮಿಕರಿಗೂ ಮರುಪಾವತಿ ಮಾಡಬೇಕು.

7. ವಿಳಂಬಮಾಡದೆ ಗ್ರಾಹಕರ ಬೆಲೆಸೂಚಿಯಲ್ಲಿರುವ ಮೋಸವನ್ನು ಸರಿಪಡಿಸಬೇಕು.

8. ಬೇಷರತ್ತಾಗಿ ಯಾವ ನಿರ್ಬಂಧಗಳನ್ನೂ ಹೇರದೆ ಎಲ್ಲಾ ಕಾರ್ಮಿಕರಿಗೂ ಬೋನಸ್ ಕೊಡಬೇಕು.

ಈ ರಾಷ್ಟ್ರೀಯ ಬೇಡಿಕೆಗಳ ಈಡೇರಿಕೆಗಾಗಿ ದೇಶಾದ್ಯಂತ ಐಕ್ಯಚಳುವಳಿಯನ್ನು ಹೂಡಲು ಸಾರ್ವಜನಿಕ ಕ್ಷೇತ್ರದ ಸಮಸ್ತ ಕಾರ್ಮಿಕರಿಗೂ ಸಮಾವೇಶವು ಕರೆಕೊಟ್ಟಿದೆ.

ಸಮಾವೇಶವು ಈ ಚಳುವಳಿಯ ಕಾರ್ಯಕ್ರಮವನ್ನು ಈ ರೀತಿ ರೂಪಿಸಿದೆ:-

1979ರ ಆಗಸ್ಟ್ 13 ರಂದು ಎಲ್ಲಾ ಸಾರ್ವಜನಿಕ ಕ್ಷೇತ್ರದ ಸ್ಥಾವರಗಳಲ್ಲೂ ಈ ಬೇಡಿಕೆಗಳನ್ನು ಜನಪ್ರಿಯಗೊಳಿಸಲು ಐಕ್ಯ ಪ್ರದರ್ಶನಗಳನ್ನು ನಡೆಸಿ "ಸಾರ್ವಜನಿಕ ಕ್ಷೇತ್ರದ ನೌಕರರ ಅಖಿಲ ಭಾರತ ಬೇಡಿಕೆಗಳ ದಿನ"ವನ್ನು ಆಚರಿಸುವುದು.

1979 ಆಗಸ್ಟ್ 29 ರಂದು ಸಾಮೂಹಿಕ ಪ್ರದರ್ಶನಗಳ ಮೂಲಕ ಸಾರ್ವಜನಿಕ ಕ್ಷೇತ್ರದ ಸಂಸ್ಥೆಗಳ ಆಡಳಿತ ಮಂಡಳಿಗಳಿಗೆ ಮುಷ್ಕರದ ನೋಟೀಸನ್ನು ಕೊಡುವುದು.

1979ರ ಸೆಪ್ಟಂಬರ್ 14 ರಂದು ಎಲ್ಲಾ ಸಾರ್ವಜನಿಕ ಕ್ಷೇತ್ರದ ಸಂಸ್ಥೆಗಳಲ್ಲಿ ಒಂದು ದಿವಸದ ಮುಷ್ಕರ ನಡೆಸುವುದು.

ಪ್ರತಿಯೊಂದು ಕೇಂದ್ರ ಕಾರ್ಮಿಕ ಸಂಘಟನೆಯಿಂದ ಇಬ್ಬರು ಪ್ರತಿನಿಧಿಗಳನ್ನೊಳಗೊಂಡ 'ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಕ್ರಿಯಾ ಸಮಿತಿ'ಯನ್ನು ರಚಿಸಲು ಸಮಾವೇಶವು ತೀರ್ಮಾನಿಸಿದೆ. ಈ ಬೇಡಿಕೆಗಳಿಗಾಗಿ ಕ್ರಿಯಾ ಸಮಿತಿಯು ಪ್ರಕ್ಷೋಭೆಯನ್ನು ಸಂಘಟಿಸಿ ನಡೆಸುವುದಲ್ಲದೆ, ಪರಿಸ್ಥಿತಿಗೆ ಅನುಗುಣವಾಗಿ ಕಾಲಕಾಲಕ್ಕೆ ಸೂಕ್ತ ತೀರ್ಮಾನಗಳನ್ನು ಮಾಡುವುದು, ಸೂಕ್ತ ಹೋರಾಟದ ಸಾರ್ವಜನಿಕ ಕ್ಷೇತ್ರದ ಕಾರ್ಮಿಕ ಸಂಘಗಳಿಗೆ ಮಾರ್ಗದರ್ಶನ ಕೊಡುವ ಕೆಲಸಗಳನ್ನು ಮಾಡುತ್ತದೆ.

ಸಮಾವೇಶದ ಅಧ್ಯಕ್ಷ ಮಂಡಳಿಯ ಪರವಾಗಿ ಮದನ್ ಫಡ್ನೀಸ್ ಮುಕ್ತಾಯ ಭಾಷಣ ಮಾಡಿದರು. ಸ್ವಾಗತ ಸಮಿತಿಯ ಪರವಾಗಿ ಎಸ್. ಸೂರ್ಯನಾರಾಯಣರಾಯರು ವಂದನಾರ್ಪಣೆ ಮಾಡಿದರು.

ಸಮಾವೇಶದ ಅಂಗವಾಗಿ 20ರ ಸಂಜೆ ಕಬ್ಬನ್‌ಪಾರ್ಕಿನಲ್ಲಿ ಬಹಿರಂಗ ಸಭೆ ನಡೆಯಿತು. ○

ಸಂಪಾದಕೀಯ

[ಒಂದನೇ ಪುಟದಿಂದ]

ಬೆಲೆ ಪ್ರಜಾಪ್ರಭುತ್ವದ ಕೊಲೆಯಾಗಬಹುದು. ಈ ಎಲ್ಲಾ ಅನಿಶ್ಚಿತತೆಗಳನ್ನು ತಾತ್ಕಾಲಿಕವಾಗಿ ಹೋಗಲಾಡಿಸಬೇಕಾದರೆ, ಮಧ್ಯಾಂತರ ಚುನಾವಣೆಯೊಂದೇ ದಾರಿಯಾಗಬಹುದು. ಈಗಾಗಲೇ ಎಲ್ಲಾ ರಾಜಕೀಯ ಪಕ್ಷಗಳ ಗಮನ ಈ ಕಡೆಯೂ ಹರಿದಿದೆ. ಮಧ್ಯಾಂತರ ಚುನಾವಣೆ ನಡೆದರೆ ಅದಕ್ಕೂ ಸಿದ್ಧ ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಹೇಳಿದೆ.

ಸಮಸ್ಯೆಗಳಿಗೆ ಶಾಶ್ವತ ಪರಿಹಾರವು ಮತ್ತು ಸುಭದ್ರ ಸರಕಾರವು ರಚಿತವಾಗಬೇಕಾದರೆ ಮಧ್ಯಾಂತರ ಚುನಾವಣೆಗಿಂತಲೂ ಮುಖ್ಯ ಎಲ್ಲಾ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗುವುದು ಅವಶ್ಯ.

[ಜನತಾ (ಎಸ್) ಪಕ್ಷದ ಚರಣಸಿಂಗ್ ಅವರನ್ನು ಕೇಂದ್ರದಲ್ಲಿ ಹೊಸ ಸರಕಾರ ರಚಿಸಲು ರಾಷ್ಟ್ರಪತಿಯವರು ಅಹ್ವಾನಿಸಿದ ಸುದ್ದಿಯು ಸಂಪಾದಕೀಯವು ಅಚ್ಚಾಗುತ್ತಿದ್ದಂತೆಯೇ ಬಂದಿದೆ. ಚರಣಸಿಂಗರನ್ನು ಬೇಗ ವಿಶ್ವಾಸಮತ ಕೇಳುವಂತೆಯೂ ರಾಷ್ಟ್ರಪತಿಯವರು ಕೇಳಿರುವರು. ಆದರೆ ರಾಜಕೀಯ ಗೊಂದಲ, ಮತ್ತು ಅನಿಶ್ಚಿತತೆಗಳು ಕೊನೆಗೊಂಡಿಲ್ಲ.] ○

ಪರಿಸರ

ತಿರುಪತಿ ದೇವಸ್ಥಾನಗಳು ಯಾವಾಗಲೂ ಭಕ್ತಾದಿಗಳಿಂದ ಕಿಕ್ಕಿರಿದಿರುತ್ತಿದ್ದುದು ಸಾಮಾನ್ಯ ಸಂಗತಿ, ಆದರೆ ಬುಧವಾರ (ಜುಲೈ 11) ಎಲ್ಲಾ ಛತ್ರಗಳೂ, ಪ್ರವಾಸಿ ಮಂದಿರಗಳೂ, ಖಾಲಿ ಏಕೆಂದರೆ 'ಸ್ಕೈಲ್ಯಾಬ್'.

—ದಿ ಹಿಂದು

ಸರ್ಕಾರದ ಕಾರ್ಯಕ್ರಮಗಳಾವುವು ಮತ್ತು ಸರ್ಕಾರ ಮಾಡಿರುವ ಶಾಸನಗಳಾವುವು ಎಂಬುದು ನಮ್ಮ ಸರ್ಕಾರಿ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಗೊತ್ತೇ ಇಲ್ಲ ಅಥವಾ ಅವರಿಗೆ ಸರ್ಕಾರಿ ಕಾರ್ಯಕ್ರಮ ಮತ್ತು ಶಾಸನಗಳ ಬಗ್ಗೆ ತುಂಬಾ ಅಸಡ್ಡೆ ಇದೆ.

—ಬಿ. ಬಸವಲಿಂಗಪ್ಪ
(ಕರ್ನಾಟಕ ರಾಜ್ಯದ ಕಂದಾಯ ಸಚಿವರು)

ಪಶ್ಚಿಮ ಬಂಗಾಳ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯದ ಹಣವನ್ನು ಸರ್ಕಾರವು ನೇರವಾಗಿ ಪಂಚಾಯತಿಗಳಿಗೆ ಕೊಡುತ್ತಿದೆ. ಹಳ್ಳಿಯ ಜನತೆ ಈ ಹಣದಿಂದ ತಮಗೆ ಅಗತ್ಯವಿರುವ ಕೆರೆಕಟ್ಟೆ, ಸ್ಕೂಲು, ಆಸ್ಪತ್ರೆ ಮುಂತಾದುವುಗಳನ್ನು ತಾವೇ ನಿರ್ಮಿಸುತ್ತಿದ್ದಾರೆ. ಅಂದರೆ ಇಲ್ಲಿಯ ಜನತೆಗೆ ತಮಗೇನು ಬೇಕು ಎಂದು ನಿರ್ಧರಿಸುವ ಅವಕಾಶ ಇದೆ ಮತ್ತು ರಾಜ್ಯದ ಅಭಿವೃದ್ಧಿಯಲ್ಲಿ ಜನತೆಯ ಭಾಗವಹಿಸುವಿಕೆ ಇದೆ.

—ಬೆಂಗಳೂರು ಆಕಾಶವಾಣಿ ಕೇಂದ್ರದಿಂದ 'ಯುವವಾಣಿ' ಕಾರ್ಯಕ್ರಮದಲ್ಲಿ ಶ್ರೀ ಸುರೇಶ್

ಮೊರಾರ್ಜಿ ದೇಸಾಯಿಯವರು ತಮ್ಮ ಅಧಿಕಾರವನ್ನು ಳಿಸಿಕೊಳ್ಳಲು ಜಾತ್ಯಾಂಧ ಮತ್ತು ಮತಾಂಧ ಹಿಂದೂ ರಾಷ್ಟ್ರವಾದಿಗಳಾದ ಅರ್. ಎಸ್. ಎಸ್. ನವರನ್ನು ಸಂಪೂರ್ಣವಾಗಿ ಅವಲಂಭಿಸಿದರು. ಆರ್. ಎಸ್. ಎಸ್. ನಂತೆಯೇ, ಮುದುಕ ಮೊರಾರ್ಜಿಯವರ ಚಿಂತನೆಗಳು ಹಳೆಯವು ಮತ್ತು ಸಾಂಪ್ರದಾಯಿಕವಾದವುಗಳು. ಜಾತ್ಯಾತೀತ ಮತ್ತು ಆಧುನಿಕವಾದ ಭಾರತದಂತಹ ಮಹಾನ್ ಪ್ರಜಾಪ್ರಭುತ್ವ ರಾಷ್ಟ್ರವೊಂದಕ್ಕೆ ಇವರು ಸಹಜವಾಗೇ ನಾಯಕತ್ವ ಕೊಡಲಾರದೇ ಹೋದರು.

ಮೊರಾರ್ಜಿ ಸರ್ಕಾರ ರಾಜಿನಾಮೆ ಕೊಟ್ಟ ಬಗ್ಗೆ ಲಂಡನ್ ದಿನ ಪತ್ರಿಕೆ 'ಗಾರ್ಡಿಯನ್'ನಲ್ಲಿ ಸಂಪಾದಕೀಯ

ರಾಜಕಾರಣದಲ್ಲಿ ಯಾವಾಗಲೂ ನೈತಿಕತೆಯನ್ನು ಕಾಪಾಡಿಕೊಂಡು ಬರುವುದು ಕಷ್ಟ.

—ದೇವರಾಜ ಅರಸು

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist), Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT